# ಸಮಾಜ ಕಲ್ಯಾಣ ಇಲಾಖೆ

**ಸನ್ಮಾನ್ಯ ಮುಖ್ಯಮಂತ್ರಿಗಳು ಮತ್ತು ಅಧ್ಯಕ್ಷರು ರಾಜ್ಯ ಅನುಸೂಚಿತ ಜಾತಿಗಳ/ಅನುಸೂಚಿತ ಪಂಗಡಗಳ ಅಭಿವೃದ್ಧಿ ಪರಿಷತ್ ಇವರ ಅಧ್ಯಕ್ಷತೆಯಲ್ಲಿ ಕರ್ನಾಟಕ ಅನುಸೂಚಿತ ಜಾತಿಗಳ ಉಪ ಹಂಚಿಕೆ ಮತ್ತು ಬುಡಕಟ್ಟು ಉಪಹಂಚಿಕೆ (ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) ಅಧಿನಿಯಮ-2013 ರಂತೆ ದಿನಾಂಕ: 02.07.2021 ರಂದು ನಡೆದ ಸಭೆಯ ನಡವಳಿಗಳು**

**ಸ್ಥಳ**: ಕೊಠಡಿ ಸಂಖ್ಯೆ:334, 3ನೇ ಮಹಡಿ,ಸಮ್ಮೇಳನ ಸಭಾಂಗಣ,ವಿಧಾನಸೌಧ, ಬೆಂಗಳೂರು.

**ಸಭೆಗೆ ಹಾಜರಾದ ಸದಸ್ಯರುಗಳ ಮತ್ತು ಅಧಿಕಾರಿಗಳ ವಿವರ:-**

| | ಹೆಸರು | ಪದನಾಮ |
|---|---|---|
| 1. | ಶ್ರೀ. ಬಿ.ಎಸ್.ಯಡಿಯೂರಪ್ಪ,<br>ಸನ್ಮಾನ್ಯ ಮುಖ್ಯಮಂತ್ರಿಗಳು. | ಅಧ್ಯಕ್ಷರು |
| 2. | ಶ್ರೀ ಬಿ ಶ್ರೀರಾಮುಲು<br>ಮಾನ್ಯ ಸಮಾಜ ಕಲ್ಯಾಣ ಸಚಿವರು,<br>ವಿಧಾನಸೌಧ, ಬೆಂಗಳೂರು. | ಉಪಾಧ್ಯಕ್ಷರು |
| 3. | ಶ್ರೀ ಗೋವಿಂದ ಎಂ ಕಾರಜೋಳ,<br>ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಲೋಕೋಪಯೋಗಿ ಸಚಿವರು. | ವಿಶೇಷ ಆಹ್ವಾನಿತರು |
| 4. | ಶ್ರೀ ಲಕ್ಷ್ಮಣ ಸಂಗಪ್ಪ ಸವದಿ<br>ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂಸಾರಿಗೆ ಸಚಿವರು | ವಿಶೇಷ ಆಹ್ವಾನಿತರು |
| 5. | ಶ್ರೀ. ಕೆ.ಎಸ್.ಈಶ್ವರಪ್ಪ,<br>ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು | ಸದಸ್ಯರು |
| 6. | ಡಾ॥ ಜಿ.ಉಮೇಶ ಜಾಧವ್<br>ಮಾನ್ಯ ಲೋಕಸಭಾ ಸದಸ್ಯರು ಕಲಬುರಗಿ | ಸದಸ್ಯರು |
| 7. | ಶ್ರೀ. ಐಹೊಳೆ ದುರ್ಯೋಧನ<br>ಮಾನ್ಯ ಶಾಸಕರು, ರಾಯಭಾಗ ವಿಧಾನಸಭಾ ಕ್ಷೇತ್ರ | ಸದಸ್ಯರು |
| 8. | ಶ್ರೀ. ನರಸಿಂಹ ನಾಯಕ್ (ರಾಜುಗೌಡ)<br>ಮಾನ್ಯ ಶಾಸಕರು, ಸುರಪುರ ವಿಧಾನಸಭಾ ಕ್ಷೇತ್ರ | ಸದಸ್ಯರು |
| 9. | ಶ್ರೀ. ಎನ್. ಮಹೇಶ್<br>ಮಾನ್ಯ ಶಾಸಕರು, ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರ | ಸದಸ್ಯರು |
| 10. | ಶ್ರೀ ಪಿ. ರವಿ ಕುಮಾರ್, ಭಾ.ಆ.ಸೇ.<br>ಸರ್ಕಾರದ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ | ಸದಸ್ಯರು |
| 11. | ಶ್ರೀಮತಿ ವಂದಿತಾ ಶರ್ಮಾ, ಭಾ.ಆ.ಸೇ.<br>ಅಭಿವೃದ್ಧಿ ಆಯುಕ್ತರು ಹಾಗೂ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ | ಸದಸ್ಯರು |
| 12. | ಶ್ರೀ ಐ.ಎಸ್.ಎನ್. ಪ್ರಸಾದ್, ಭಾ.ಆ.ಸೇ.<br>ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, | ಸದಸ್ಯರು |
| 13. | ಡಾ. ಶಾಲಿನಿ ರಜನೀಶ್, ಭಾ.ಆ.ಸೇ.<br>ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಯೋಜನೆ | ಸದಸ್ಯರು |



ಗಿರೀಶ್ ಸ್ರಿ. ಹೊಸೂರ
ಮುಖ್ಯಮಂತ್ರಿಯವರ ಕಾರ್ಯದರ್ಶಿ

| | ಹೆಸರು | ಪದನಾಮ |
|---|---|---|
| | ಕಾರ್ಯಕ್ರಮಗಳ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ. | |
| 14. | ಡಾ. ಎನ್. ನಾಗಾಂಬಿಕಾ ದೇವಿ, ಭಾ.ಆ.ಸೇ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,ಸಮಾಜ ಕಲ್ಯಾಣ ಇಲಾಖೆ. | ಸದಸ್ಯ ಕಾರ್ಯದರ್ಶಿ |
| 15. | ಡಾ. ಇ. ವೆಂಕಟಯ್ಯ, ಭಾ.ಆ.ಸೇ (ನಿ) | ನೋಡಲ್ ಏಜೆನ್ಸಿ ಸಲಹೆಗಾರರು. |
| 16. | ಶ್ರೀ ಲಕ್ಷ್ಮಿ ನಾರಾಯಣ, ಭಾ.ಆ.ಸೇ(ನಿ) | ಮಾನ್ಯ ಮುಖ್ಯಮಂತ್ರಿಗಳ ಸಲಹೆಗಾರರು |
| 17. | ಉಪ ಯೋಜನೆಗಳನ್ನು ಅನುಷ್ಟಾನ ಮಾಡುತ್ತಿರುವ ಇಲಾಖೆಗಳಅಪರ ಮುಖ್ಯ ಕಾರ್ಯದರ್ಶಿಗಳು/ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು ಹಾಗೂ ಇಲಾಖಾ ಮುಖ್ಯಸ್ಥರು | (ಹಾಜರಾದ ಅಧಿಕಾರಿಗಳ ಪಟ್ಟಿ ಲಗತ್ತಿಸಿದೆ) |

ಸರ್ಕಾರದ ಅಪರ ಮುಖ್ಯಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ ಇವರು ರಾಜ್ಯ ಪರಿಷತ್ತಿನ ಅಧ್ಯಕ್ಷರಾದ ಮಾನ್ಯ ಮುಖ್ಯಮಂತ್ರಿಗಳು,ಉಪಾಧ್ಯಕ್ಷರಾದ ಮಾನ್ಯ ಸಮಾಜ ಕಲ್ಯಾಣ ಸಚಿವರು, ಸದಸ್ಯರಾದ ಮಾನ್ಯ ಸಚಿವರುಗಳನ್ನು ಮತ್ತು ರಾಜ್ಯ ಪರಿಷತ್ತಿನ ಎಲ್ಲಾ ನಾಮನಿರ್ದೇಶಿತ ಮಾನ್ಯ ಸದಸ್ಯರುಗಳು ಇವರೆಲ್ಲರನ್ನೂ ಸಭೆಗೆ ಸ್ವಾಗತಿಸಿದರು.ಎಲ್ಲಾ ಇಲಾಖೆಗಳ ಅಪರ ಮುಖ್ಯ ಕಾರ್ಯದರ್ಶಿಗಳು, ಪ್ರಧಾನ ಕಾರ್ಯದರ್ಶಿಗಳು, ಕಾರ್ಯದರ್ಶಿಗಳು ಮತ್ತು ಸಭೆಗೆ ಹಾಜರಾದ ಎಲ್ಲಾ ಇಲಾಖಾ ಮುಖ್ಯಸ್ಥರು ಹಾಗೂ ಅಧಿಕಾರಿಗಳನ್ನು ಸ್ವಾಗತಿಸಿ ಸಭೆ ನಡೆಸಲು ಅನುಮೋದನೆ ಪಡೆಯಲಾಯಿತು.

ನಂತರ ಮಾನ್ಯ ಸಮಾಜ ಕಲ್ಯಾಣ ಸಚಿವರು ಪ್ರಾಸ್ತಾವಿಕವಾಗಿ ಮಾತನಾಡಿ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಅಡಿ 2020-21 ನೇ ಸಾಲಿನಲ್ಲಿ 95% ಪ್ರಗತಿಯನ್ನು ಸಾಧಿಸಿದ ಬಗ್ಗೆ ಎಲ್ಲಾ ಅನುಷ್ಟಾನಾಧಿಕಾರಿಗಳನ್ನು ಅಭಿನಂದಿಸಿದರು. ಪ.ಜಾತಿ/ಪ.ಪಂಗಡದವರ ಅಭಿವೃದ್ಧಿಗೆ 2021-22 ನೇ ಸಾಲಿನಲ್ಲಿ ಒದಗಿಸಿರುವ ರೂ.26,005.01 ಕೋಟಿ ಅನುದಾನವನ್ನುಈಗಾಗಲೇ ಎಲ್ಲಾ ಇಲಾಖೆಗಳಿಗೆ ಹಂಚಿಕೆ ಮಾಡಿ ಮತ್ತು ವಿವಿಧ ಇಲಾಖೆಗಳ ಕಾರ್ಯಕ್ರಮಗಳ ಬಗ್ಗೆ ನೋಡಲ್ ಏಜೆನ್ಸಿ ಸಭೆಯಲ್ಲಿ ಚರ್ಚಿಸಿ ಶಿಫಾರಸ್ಸುಗಳೊಂದಿಗೆ ರಾಜ್ಯ ಅಭಿವೃದ್ಧಿ ಪರಿಷತ್ ಅನುಮೋದನೆಗಾಗಿ ಸಲ್ಲಿಸಲಾಗಿದೆ. ಇಂದಿನ ರಾಜ್ಯ ಅಭಿವೃದ್ಧಿ ಪರಿಷತ್ ಸಭೆಯಲ್ಲಿ ಕಾರ್ಯಕ್ರಮಗಳ ಬಗ್ಗೆ ಏನಾದರೂ ಮಾರ್ಪಾಡು/ಸೇರ್ಪಡೆ ಇದ್ದಲ್ಲಿ, ಆ ಬಗ್ಗೆ ಚರ್ಚಿಸಿ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಕ್ರಿಯಾ ಯೋಜನೆಗೆ ರಾಜ್ಯ ಅಭಿವೃದ್ಧಿ ಪರಿಷತ್ ಅನುಮೋದನೆ ನೀಡಲು ಕೋರಿದರು.

ನಂತರ ಅಪರ ಮುಖ್ಯ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ ಇವರು 2020-21 ನೇ ಸಾಲಿನ ಪ್ರಗತಿ ವಿವರ, 2021-22 ನೇ ಸಾಲಿನ ಆಯವ್ಯಯ ಹಾಗೂ ಅನುದಾನ ಹಂಚಿಕೆ ಮಾಡಿರುವ ಪ್ರಮುಖ ಇಲಾಖೆಗಳ ವಿವರವನ್ನು ಸಭೆಯ ಗಮನಕ್ಕೆ ತಂದರು. ವಿವರ ಈ ಕೆಳಗಿನಂತಿದೆ.



ಗಿರೀಶ್ ಹೊಸೂರ
ಮುಖ್ಯಮಂತ್ರಿಯವರ ಕಾರ್ಯದರ್ಶಿ

## 1. 2020-21ನೇ ಸಾಲಿನ ಪ್ರಗತಿ ವಿವರ

(ರೂ. ಕೋಟಿಗಳಲ್ಲಿ)

| ಉಪ ಯೋಜನೆ | ಹಂಚಿಕೆ | ವೆಚ್ಚ | ಶೇಕಡಾ ಪ್ರಗತಿ |
|---|---|---|---|
| SCSP | 18131.12 | 17352.45 | 95.71 |
| TSP | 7814.78 | 7294.54 | 93.34 |
| **ಒಟ್ಟು** | **25945.90** | **24646.99** | **94.99** |

2020-21ನೇ ಸಾಲಿನಲ್ಲಿ ಎಸ್‌ಸಿಎಸ್‌ಪಿ /ಟಿಎಸ್‌ಪಿ ಯಡಿ ಒಟ್ಟಾರೆ ಹಂಚಿಕೆಗೆ 95% ಆರ್ಥಿಕ ಪ್ರಗತಿ ಸಾಧಿಸಲಾಗಿದೆ.ಇಲಾಖಾವಾರು ಹಂಚಿಕೆ ಮತ್ತು ವೆಚ್ಚದ ವಿವರಗಳನ್ನು ಕರಡು ಕ್ರಿಯಾ ಯೋಜನೆಯಲ್ಲಿ ಒದಗಿಸಲಾಗಿದೆ.

## 2. 2021-22ನೇ ಸಾಲಿನ ಆಯವ್ಯಯದ ವಿವರ.

(ರೂ. ಕೋಟಿಗಳಲ್ಲಿ)

| ಕ್ರ. ಸಂ | ವಲಯ | ವಿವರ | ಹಂಚಿಕೆ | | |
|---|---|---|---|---|---|
| | | | ಎಸ್.ಸಿ.ಎಸ್.ಪಿ | ಟಿ.ಎಸ್.ಪಿ | ಒಟ್ಟು |
| 1 | ರಾಜ್ಯ | ರಾಜಸ್ವ | 10091.71 | 3847.35 | 13939.06 |
| | | ಬಂಡವಾಳ | 5411.98 | 2617.07 | 8029.05 |
| | | ಒಟ್ಟು | **15503.69** | **6464.42** | **21968.11** |
| 2 | ಜಿಲ್ಲಾ | ರಾಜಸ್ವ | 2827.84 | 1209.05 | 4036.89 |
| **ಒಟ್ಟು** | | | **18331.53** | **7673.47** | **26005.01** |

## 3. 2021-22ನೇ ಸಾಲಿನ ಕ್ರಿಯಾ ಯೋಜನೆಯ ವಿವರ.

2021-22ನೇ ಸಾಲಿನ ಅನುದಾನಕ್ಕೆ ಅನುಗುಣವಾಗಿ ವಿವಿಧ ಇಲಾಖೆಗಳು ಸಲ್ಲಿಸಿರುವ ಕ್ರಿಯಾ ಯೋಜನೆಗಳನ್ನು ಮಾನ್ಯ ಸಮಾಜ ಕಲ್ಯಾಣ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ:10-06-2021 ಮತ್ತು 11-06-2021 ರಂದು ನಡೆದ ನೋಡಲ್ ಏಜೆನ್ಸಿ ಸಭೆಗಳಲ್ಲಿ ಪರಿಶೀಲಿಸಿ ನೋಡಲ್ ಏಜೆನ್ಸಿ ಶಿಫಾರಸ್ಸಿನೊಂದಿಗೆ ಕ್ರಿಯಾ ಯೋಜನೆಗಳನ್ನು ರಾಜ್ಯ ಪರಿಷತ್ತಿನ ಅನುಮೋದನೆಗಾಗಿ ಮಂಡಿಸಲಾಯಿತು.

**ಪ್ರಮುಖ ಇಲಾಖೆಗಳ ಉಪಹಂಚಿಕೆ ವಿವರ:**

1. ಸಮಾಜ ಕಲ್ಯಾಣ ಇಲಾಖೆ- 20.00% (ರೂ. 5,106.16 ಕೋಟಿಗಳು)
   ಪರಿಶಿಷ್ಟ ಜಾತಿಗಳ ಕಲ್ಯಾಣ-ರೂ. 3710.47 ಕೋಟಿ (14.26%)
   ಪರಿಶಿಷ್ಟ ಪಂಗಡಗಳ ಕಲ್ಯಾಣ-ರೂ. 1395.79 ಕೋಟಿ (5.36%)
2. ನೀರಾವರಿ ಮತ್ತು ಇಂಧನ ಇಲಾಖೆಗಳು: ರೂ. 4,342.15 ಕೋಟಿ (16.69%)
3. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ – ರೂ.3134.00 ಕೋಟಿ (12.05%)
4. ನಗರಾಭಿವೃದ್ಧಿ – ರೂ. 1155.14 ಕೋಟಿಗಳು (4.44%)
5. ವಸತಿ – ರೂ. 1005.10 ಕೋಟಿ (3.87%) + ರೂ. 250.00 ಕೋಟಿಗಳನ್ನು ಸಮಾಜ ಕಲ್ಯಾಣ ಇಲಾಖೆಯ ಆಯವ್ಯಯದಲ್ಲ ನಿಗದಿಪಡಿಸಲಾಗಿದೆ.



ಗಿರೀಶ್ ಹೊಸೂರ
ಮುಖ್ಯಮಂತ್ರಿಯವರ ಕಾರ್ಯದರ್ಶಿ

6. ಲೋಕೋಪಯೋಗಿ – ರೂ.1170.29 ಕೋಟಿ (4.5%)

7. ಯೋಜನೆ ಮತ್ತು ಸಾಂಖ್ಯಿಕ – ರೂ.673.34 ಕೋಟಿ (2.59%)

8. ಕೃಷಿ ಮತ್ತು ಸಂಬಂಧಿಸಿದ ಇಲಾಖೆಗಳಿಗೆ – ರೂ.1410.30 ಕೋಟಿ (5.42%)

9. ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ – ರೂ.1290.55 ಕೋಟಿ (5.96%)

10. ಪ್ರಾಥಮಿಕ ಮತ್ತು ಉನ್ನತ ಶಿಕ್ಷಣ –ರೂ.1316.45 ಕೋಟಿ (5%)

11. ಸಾಮಾಜಿಕ/ಆಹಾರ ಭದ್ರತೆ – ಕಂದಾಯ/ಆಹಾರ ಮತ್ತು ನಾಗರಿಕ ಸರಬರಾಜು – ರೂ.3725.23 ಕೋಟಿ (14.33%)

12. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ – ರೂ. 800.62 ಕೋಟಿ (3.08%)

13. ಇತರೆ ಇಲಾಖೆಗಳಿಗೆ – ರೂ. 877.51 ಕೋಟಿ (3.38%)

ನಂತರ ಮಾನ್ಯ ಮುಖ್ಯಮಂತ್ರಿಗಳ ಅನುಮತಿಯೊಂದಿಗೆ ಕ್ರಿಯಾ ಯೋಜನೆಗಳ ಬಗ್ಗೆ ವಿವರವಾಗಿ ಚರ್ಚಿಸಲು ಪ್ರಾರಂಭಿಸಿ, 2021-22ನೇ ಸಾಲಿನಲ್ಲಿ ರಾಜ್ಯ ಅಭಿವೃದ್ಧಿ ಪರಿಷತ್ತಿನ ಅನುಮೋದನೆಗಾಗಿ ಸಲ್ಲಿಸಿದ ಇಲಾಖಾವಾರು ಕ್ರಿಯಾ ಯೋಜನೆಗಳ ವಿವರವನ್ನು ಕೆಳಕಂಡಂತೆ ಸಭೆಯಲ್ಲಿ ಮಂಡಿಸಲಾಯಿತು.

**1. ಕೃಷಿ ಇಲಾಖೆ :**

2021-22ನೇ ಸಾಲಿನಲ್ಲಿ ಹಂಚಿಕೆಯಾದ ಅನುದಾನ- ಎಸ್.ಸಿ.ಎಸ್.ಪಿ-ರೂ.596.21 ಕೋಟಿ, ಟಿ.ಎಸ್.ಪಿ- ರೂ.302.88 ಕೋಟಿ ಒಟ್ಟು ರೂ.899.09 ಕೋಟಿ.

ಪ್ರಸ್ತಾಪಿಸಿದ ಕಾರ್ಯಕ್ರಮಗಳ ಬಗ್ಗೆ ಚರ್ಚಿಸಿ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಯಿತು.

ಕೃಷಿ ಇಲಾಖೆಯಿಂದ ಯಂತ್ರೋಪಕರಣ/ಹನಿ ನೀರಾವರಿ ಘಟಕಗಳನ್ನು ಒದಗಿಸಲು 90% ಅಥವಾ ಗರಿಷ್ಟ ರೂ.1.00 ಲಕ್ಷ ಮತ್ತು ಟ್ರ್ಯಾಕ್ಟರ್‌ಗೆ ರೂ.3.00 ಲಕ್ಷ ಸಹಾಯಧನ ನೀಡುವುದನ್ನು ಮತ್ತು ಬಿತ್ತನೆ ಬೀಜ ವಿತರಿಸಲು ಸಹಾಯಧನವನ್ನು ಹಿಂದಿನ ವರ್ಷದಂತೆ ಮುಂದುವರೆಸಲು ತೀರ್ಮಾನಿಸಲಾಗಿದೆ.

(ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ).

**(ಕ್ರಮ: ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಕೃಷಿ ಇಲಾಖೆ)**

**2. ತೋಟಗಾರಿಕೆ ಇಲಾಖೆ:**

2021-22ನೇ ಸಾಲಿನಲ್ಲಿ ಹಂಚಿಕೆಯಾದ ಅನುದಾನ- ಎಸ್.ಸಿ.ಎಸ್.ಪಿ-ರೂ.109.04 ಕೋಟಿ, ಟಿ.ಎಸ್.ಪಿ- ರೂ.46.98 ಕೋಟಿ ಒಟ್ಟು ರೂ.156.02 ಕೋಟಿ.

ತೋಟಗಾರಿಕೆ ಇಲಾಖೆಯಿಂದ ಯಂತ್ರೋಪಕರಣ/ಹನಿ ನೀರಾವರಿ ಘಟಕಗಳನ್ನು ಒದಗಿಸಲು 90% ಅಥವಾ ಗರಿಷ್ಟ ರೂ.1.00 ಲಕ್ಷ ಮತ್ತು ಟ್ರ್ಯಾಕ್ಟರ್‌ಗೆ ರೂ.3.00 ಲಕ್ಷ ಸಹಾಯಧನ ನೀಡುವುದನ್ನು ಮುಂದುವರೆಸಲಾಗಿದೆ. ವಿವಿಧ ಕಾರ್ಯಕ್ರಮಗಳಿಗೆ ಅನುಮೋದನೆ ನೀಡಲಾಗಿದೆ.



ಗಿರೀಶ್ ಸಿ. ಹೊಸೂರ
ಮುಖ್ಯಮಂತ್ರಿಯವರ ಕಾರ್ಯದರ್ಶಿ

ಹಿಂದೆ ಸಹಾಯಧನ ನೀಡಿರುವ ಪಾಲಿಹೌಸ್‌ಗಳಿಂದ ಪ.ಜಾತಿ/ಪ.ಪಂಗಡದ ರೈತರಿಗೆ ಎಷ್ಟರ ಮಟ್ಟಿಗೆ ಆದಾಯ ಬಂದಿದೆ ಅಥವಾ ಇಲ್ಲವೇ ಎಂಬ ಬಗ್ಗೆ ಅಧ್ಯಯನ ಮಾಡಿ ಸದರಿ ಯೋಜನೆಯನ್ನು ಮುಂದುವರೆಸುವ ಬಗ್ಗೆ ಪರಿಶೀಲಿಸಿ ಕ್ರಮ ವಹಿಸಲು ನಿರ್ಧರಿಸಲಾಯಿತು.

ಪ್ರಸ್ತಾಪಿಸಿದ ಕಾರ್ಯಕ್ರಮಗಳ ಬಗ್ಗೆ ಚರ್ಚಿಸಿ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಯಿತು.

(ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ).

**(ಕ್ರಮ: ಸರ್ಕಾರದಪ್ರಧಾನ ಕಾರ್ಯದರ್ಶಿ, ತೋಟಗಾರಿಕೆ ಇಲಾಖೆ)**

## 3. ರೇಷ್ಮೆ ಇಲಾಖೆ:-

2021-22ನೇ ಸಾಲಿನಲ್ಲಿ ಹಂಚಿಕೆಯಾದ ಅನುದಾನ- ಎಸ್.ಸಿ.ಎಸ್.ಪಿ-ರೂ.15.51 ಕೋಟಿ, ಟಿ.ಎಸ್.ಪಿ- ರೂ.7.65 ಕೋಟಿ ಒಟ್ಟು ರೂ.23.16 ಕೋಟಿ.

ರೇಷ್ಮೆ ಇಲಾಖೆಯ ಕಾರ್ಯಕ್ರಮಗಳಿಗೆ ಸಹಾಯಧನ 90% ಹಾಗೂ ಫಲಾನುಭವಿಗಳ ವಂತಿಗೆ 10% ರಂತೆ ನೀಡುತ್ತಿದ್ದು, ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಯಿತು.

(ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ).

**(ಕ್ರಮ: ಸರ್ಕಾರದ ಪ್ರಧಾನ ಕಾರ್ಯದರ್ಶಿ, ರೇಷ್ಮೆ ಇಲಾಖೆ)**

## 4. ಪಶು ಸಂಗೋಪನೆ ಇಲಾಖೆ :-

2021-22ನೇ ಸಾಲಿನಲ್ಲಿ ಹಂಚಿಕೆಯಾದ ಅನುದಾನ- ಎಸ್.ಸಿ.ಎಸ್.ಪಿ-ರೂ.121.67 ಕೋಟಿ, ಟಿ.ಎಸ್.ಪಿ- ರೂ.73.56ಕೋಟಿ ಒಟ್ಟು ರೂ.195.23 ಕೋಟಿ.

ಪ್ರಸ್ತಾಪಿಸಿದ ಕಾರ್ಯಕ್ರಮಗಳ ಬಗ್ಗೆ ಚರ್ಚಿಸಿ, ಈ ಕೆಳಗಿನಂತೆ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಯಿತು.

1. ಹಾಲು ಉತ್ಪಾದಕರಿಗೆ ಉತ್ತೇಜನ ರೂ.179.92 ಕೋಟಿ (ರೂ.111.38 +ರೂ.68.54 ಕೋಟಿ) ಉಳಿಕೆಯಾಗುವ ಅನುದಾನದಲ್ಲಿ ಪ.ಜಾತಿ/ಪ.ಪಂಗಡದ ಬಿ.ಪಿ.ಎಲ್ ಕುಟುಂಬಗಳಿಗೆ ಮೊದಲನೇ ಆದ್ಯತೆ ಮೇಲೆ ಕುರಿ/ಮೇಕೆಘಟಕಗಳಿಗೆ 90% ಸಹಾಯಧನ.
   ಇನ್ನೂ ಅನುದಾನ ಉಳಿಕೆಯಾದಲ್ಲಿ ಹಸು/ಎಮ್ಮೆ ಘಟಕಗಳಿಗೆ 75% (ರೂ. 52500/-) ಸಹಾಯಧನ ನೀಡುವುದು.
2. ವಿದ್ಯುತ್ ಚಾಲಿತ ಹಾಲು ಕರೆಯುವ ಯಂತ್ರಕ್ಕೆ ಶೇ.90 ರಷ್ಟು ಸಹಾಯಧನ, ಶೇ.10ರಷ್ಟು ಫಲಾನುಭವಿಗಳ ವಂತಿಕೆ (ಘಟಕ ವೆಚ್ಚ ರೂ. 45,000/-).
3. ಇತರೆ ಮುಂದುವರೆದ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡುವುದು.

(ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ).

**(ಕ್ರಮ: ಸರ್ಕಾರದ ಕಾರ್ಯದರ್ಶಿ, ಪಶುಸಂಗೋಪನೆ ಇಲಾಖೆ)**



ಗಿರೀಶ್ ಕೆ. ಹೊಸೂರ
ಮುಖ್ಯಮಂತ್ರಿಯವರ ಕಾರ್ಯದರ್ಶಿ

**5. ಮೀನುಗಾರಿಕೆ ಇಲಾಖೆ:-**

2021-22ನೇ ಸಾಲಿನಲ್ಲಿ ಹಂಚಿಕೆಯಾದ ಅನುದಾನ- ಎಸ್.ಸಿ.ಎಸ್.ಪಿ-ರೂ.8.26 ಕೋಟಿ, ಟಿ.ಎಸ್.ಪಿ- ರೂ.2.07 ಕೋಟಿ ಒಟ್ಟು ರೂ.10.33 ಕೋಟಿ.

ಪ್ರಸ್ತಾಪಿಸಿದ ಕಾರ್ಯಕ್ರಮಗಳ ಬಗ್ಗೆ ಚರ್ಚಿಸಿ, ಈ ಕೆಳಗಿನಂತೆ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಯಿತು.

1. ಪ್ರಧಾನ ಮಂತ್ರಿ ಮತ್ಸ್ಯ ಸಂಪದ ಯೋಜನೆಯಡಿ ಅನುಷ್ಠಾನ ಮಾಡುವ ಕಾರ್ಯಕ್ರಮಗಳಿಗೆ ಶೇ.60 ರಷ್ಟು ಸಹಾಯಧನ.
2. ಪರಿಶಿಷ್ಟ ಜಾತಿಯ ಮೀನುಗಾರರಿಗೆ ಮೀನು ಸಾಗಾಣಿಕೆ ವಾಹನ(3 ಅಥವಾ 4 ಚಕ್ರದ ವಾಹನ ಖರೀದಿಸಲು) ಘಟಕ ವೆಚ್ಚ ರೂ. 3.00 ಲಕ್ಷದಲ್ಲಿ ಶೇ.60 ರಷ್ಟು ಸಹಾಯಧನ. ಗರಿಷ್ಟ ರೂ. 1.80 ಲಕ್ಷ
3. ಇತರೆ ಮುಂದುವರೆದ ಕಾರ್ಯಕ್ರಮಗಳನ್ನು ಅನುಷ್ಟಾನ ಮಾಡುವುದು.

(ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ).

**(ಕ್ರಮ: ಸರ್ಕಾರದ ಕಾರ್ಯದರ್ಶಿ, ಮೀನುಗಾರಿಕೆ ಇಲಾಖೆ)**

**6. ಅರಣ್ಯ ಇಲಾಖೆ :-**

2021-22ನೇ ಸಾಲಿನಲ್ಲಿ ಹಂಚಿಕೆಯಾದ ಅನುದಾನ- ಎಸ್.ಸಿ.ಎಸ್.ಪಿ-ರೂ.6.68 ಕೋಟಿ, ಟಿ.ಎಸ್.ಪಿ- ರೂ.3.14 ಕೋಟಿ ಒಟ್ಟು ರೂ.9.81 ಕೋಟಿ.

1. ಹುಲಿ ಯೋಜನೆಯಡಿಭಾರತ ಸರ್ಕಾರದಿಂದ ಅನುದಾನ ನೀಡಲಾಗುತ್ತಿದ್ದು,ಕೇಂದ್ರ ಸರ್ಕಾರದ ಮಾರ್ಗಸೂಚಿಗಳಂತೆ ಕಾರ್ಯಕ್ರಮವನ್ನು ಅನುಷ್ಟಾನ ಮಾಡುವುದು.
2. ಮುಂದುವರೆದ ಕಾರ್ಯಕ್ರಮಗಳನ್ನು ಅನುಷ್ಟಾನಗೊಳಸುವುದು.

ಪ್ರಸ್ತಾಪಿಸಿದ ಕಾರ್ಯಕ್ರಮಗಳ ಬಗ್ಗೆ ಚರ್ಚಿಸಿ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಯಿತು.

(ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ).

**(ಕ್ರಮ: ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಅರಣ್ಯ ಇಲಾಖೆ)**

**7. ಸಹಕಾರ ಇಲಾಖೆ:-**

2021-22ನೇ ಸಾಲಿನಲ್ಲಿ ಹಂಚಿಕೆಯಾದ ಅನುದಾನ- ಎಸ್.ಸಿ.ಎಸ್.ಪಿ-ರೂ.71.36 ಕೋಟಿ, ಟಿ.ಎಸ್.ಪಿ- ರೂ.45.29 ಕೋಟಿ ಒಟ್ಟು ರೂ.116.65ಕೋಟಿ.

ಪ್ರಸ್ತಾಪಿಸಿದ ಕಾರ್ಯಕ್ರಮಗಳ ಬಗ್ಗೆ ಚರ್ಚಿಸಿ, ಈ ಕೆಳಗಿನಂತೆ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಯಿತು.

1. ಕನಿಷ್ಟ ಬೆಂಬಲ ಬೆಲೆ ಕಾರ್ಯಕ್ರಮಗಳನ್ನು ಅನುಷ್ಟಾನ ಮಾಡದೇ ಇದ್ದಲ್ಲಿ, ಒದಗಿಸಿರುವ ರೂ.15.00 ಕೋಟಿ ಅನುದಾನವನ್ನು ಆದ್ಯರ್ಪಿಸುವುದು. (ಎಸ್.ಸಿ.ಎಸ್.ಪಿ ರೂ. 12.00 ಕೋಟಿ , ಟಿ.ಎಸ್.ಪಿ ರೂ. 3.00 ಕೋಟಿ)



ಗಿರೀಶ್ ಹೊಸೂರ
ಮುಖ್ಯಮಂತ್ರಿಯವರ ಕಾರ್ಯದರ್ಶಿ

2. ಸಹಕಾರ ಸಂಘಗಳಲ್ಲಿ ಸದಸ್ಯತ್ವ ಶುಲ್ಕ ಯೋಜನೆಯಡಿ ಸದಸ್ಯತ್ವ ಶುಲ್ಕ ರೂ.1,000/- ಮತ್ತು ಕಬ್ಬು ಸಕ್ಕರೆ ಸಹಕಾರ ಸಂಘಗಳಲ್ಲಿ ಗರಿಷ್ಠ ರೂ.2,500/- ರಂತೆ ಸದಸ್ಯತ್ವ ಶುಲ್ಕ ಭರಿಸುವುದು.
3. ಗೋದಾಮುಗಳಲ್ಲಿ ಕೃಷಿ ಉತ್ಪನ್ನಗಳ ಸಂಗ್ರಹಣೆಗೆ ಬಾಡಿಗೆಯಡಿ ಎಲ್ಲಾ ಕೃಷಿಕರಿಗೂ ಶೇ.25 ರಷ್ಟು ಸಹಾಯಧನ ನೀಡಲು ಇಲಾಖೆ ಪ್ರಸ್ತಾಪಿಸಿದ್ದು, ಎಸ್.ಸಿ/ಎಸ್.ಟಿ. ರೈತರಿಗೆ ಶೇ.50 ರಷ್ಟು ಸಹಾಯಧನ ನೀಡುವುದು.
4. ಇತರೆ ಮುಂದುವರೆದ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡುವುದು.

(ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ).

**(ಕ್ರಮ: ಸರ್ಕಾರದ ಪ್ರಧಾನಕಾರ್ಯದರ್ಶಿ, ಸಹಕಾರ ಇಲಾಖೆ)**

**8.ಸಾರಿಗೆ ಇಲಾಖೆ:**

2021-22ನೇ ಸಾಲಿನಲ್ಲಿ ಹಂಚಿಕೆಯಾದ ಅನುದಾನ- ಎಸ್.ಸಿ.ಎಸ್.ಪಿ-ರೂ.236.70 ಕೋಟಿ, ಟಿ.ಎಸ್.ಪಿ- ರೂ.105.34 ಕೋಟಿ ಒಟ್ಟು ರೂ.342.04 ಕೋಟಿ.

ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು ಮಾತನಾಡಿ, ಪ್ರಸಕ್ತ ಸಾಲಿನಲ್ಲಿ ಶಾಲೆ/ಕಾಲೇಜುಗಳು ಇನ್ನೂ ಪ್ರಾರಂಭವಾಗದೇ ಇರುವುದರಿಂದ ಈ ವರ್ಷದ ಅನುದಾನ ಉಳಿಕೆಯಾಗುವ ಸಾಧ್ಯತೆಯಿದೆ.ಹಿಂದಿನ ವರ್ಷ ಅನುದಾನವನ್ನು ಹಿಂಪಡೆಯಲಾಗಿದೆ.ಆದರೆ, ಬಸ್ ಪಾಸ್‌ಗಳಿಗೆ ನಿಗಮಗಳಿಂದ ಹೆಚ್ಚುವರಿಯಾಗಿ ಭರಿಸಿರುವ ಅನುದಾನವನ್ನು ಸರ್ಕಾರದಿಂದ ಈವರೆಗೂ ಒದಗಿಸಿರುವುದಿಲ್ಲ. ಆದ್ದರಿಂದ, ಈ ಬಾಕಿ ಮೊತ್ತವನ್ನು ಪ್ರಸಕ್ತ ಸಾಲಿನ ಅನುದಾನದಲ್ಲಿ ಭರಿಸಲಾಗುವುದು ಎಂದು ತಿಳಿಸಿದರು.ಅಲ್ಲದೇ ಕೆ.ಎಸ್.ಆರ್.ಟಿ.ಸಿ ಯಿಂದ ಈಗಾಗಲೇ ವಾಹನ ಚಾಲನಾ ತರಬೇತಿ ಘಟಕಗಳನ್ನು ಸ್ಥಾಪಿಸಲು ಅನುಮೋದನೆ ನೀಡಿದ್ದು, ಇದನ್ನು ಪೂರ್ಣಗೊಳಿಸಲು ಹೆಚ್ಚುವರಿ ಅನುದಾನ ಒದಗಿಸುವಂತೆ ಕೋರಿದರು.

ಆರ್ಥಿಕ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಉತ್ತರಿಸಿ, ಆರ್ಥಿಕ ಸಂಕಷ್ಟದ ಹಿನ್ನೆಲೆಯಲ್ಲಿ ಸರ್ಕಾರದಿಂದ ಕಟ್ಟಡಗಳಿಗೆ ಅನುದಾನ ಒದಗಿಸುವುದು ಕಷ್ಟವಾಗುತ್ತದೆ ಮತ್ತು ಖಾಸಗಿ ತರಬೇತಿ ಸಂಸ್ಥೆಗಳ ಮೂಲಕ ತರಬೇತಿ ನೀಡುವುದು ಸೂಕ್ತವೆಂದು ಅಭಿಪ್ರಾಯಿಸಿದರು.

ಪ್ರಧಾನ ಕಾರ್ಯದರ್ಶಿ, ಸಾರಿಗೆ ಇಲಾಖೆ ಇವರು ಮಾತನಾಡಿ, ವಾಹನ ಚಾಲನಾ ತರಬೇತಿಗೆ ವಿಶೇಷ ಟ್ರ್ಯಾಕ್‌ಗಳ ಅಗತ್ಯವಿದ್ದು, ತರಬೇತಿ ಪಡೆಯುವವರಿಗೆ ವಸತಿ ವ್ಯವಸ್ಥೆ ಮಾಡಿ ಕೆ.ಎಸ್.ಆರ್.ಟಿ.ಸಿ ವತಿಯಿಂದ ತರಬೇತಿ ನೀಡುವ ಅಗತ್ಯವಿದೆ ಎಂದು ಹೇಳಿದರು.

ಈ ಬಗ್ಗೆ ಚರ್ಚಿಸಿ ಈಗಾಗಲೇ ಪ್ರಾರಂಭಿಸಿ ಅಪೂರ್ಣಗೊಂಡಿರುವ ವಾಹನ ಚಾಲನಾ ತರಬೇತಿ ಕೇಂದ್ರಗಳನ್ನು ಪೂರ್ಣಗೊಳಿಸುವ ಬಗ್ಗೆ ಕ್ರಮವಹಿಸುವಂತೆ ಮಾನ್ಯ ಮುಖ್ಯಮಂತ್ರಿಗಳು ತಿಳಿಸಿದರು.

ಪ್ರಸ್ತಾಪಿಸಿದ ಕಾರ್ಯಕ್ರಮಗಳ ಬಗ್ಗೆ ಚರ್ಚಿಸಿ ಈ ಕೆಳಗಿನಂತೆ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಯಿತು.

1. ಎಸ್.ಸಿ/ಎಸ್.ಟಿ ವಿದ್ಯಾರ್ಥಿಗಳಿಗೆ ಉಚಿತ ಬಸ್‌ಪಾಸ್ ವಿತರಣೆ.



ಗಿರೀಶ್ ಪ್ರಿ. ಹೊಸೂರ
ಮುಖ್ಯಮಂತ್ರಿಯವರ ಕಾರ್ಯದರ್ಶಿ

2. ಬಂಡವಾಳ ಲೆಕ್ಕಶೀರ್ಷಿಕೆಯಲ್ಲಿ ಒದಗಿಸಿದ ರೂ.3.98 ಕೋಟಿಗಳನ್ನು ವಾಹನ ಚಾಲನಾ ಘಟಕಗಳ ಕಟ್ಟಡ ನಿರ್ಮಾಣಕ್ಕಾಗಿ ವಿನಿಯೋಗಿಸುವುದು.
3. ಬಿ.ಎಂ.ಟಿ.ಸಿ ಮೂಲಕ ಲಘು/ಭಾರೀ ವಾಹನ ಚಾಲನಾ ತರಬೇತಿ
4. ಪ.ಜಾತಿ/ಪ.ಪಂಗಡದ ಐಟಿಐ ಮತ್ತು ಡಿಪ್ಲೋಮಾ ವಿದ್ಯಾರ್ಹತೆ ಹೊಂದಿರುವ ನಿರುದ್ಯೋಗಿಗಳಿಗೆ ವಾಹನ ರಿಪೇರಿ, ಮೆಕ್ಯಾನಿಕ್ ವಲಯದಲ್ಲಿ ಪ್ರಾಯೋಗಿಕ ತರಬೇತಿಗಳನ್ನು ನೀಡುವುದು.

(ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ).

**(ಕ್ರಮ: ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಾರಿಗೆ ಇಲಾಖೆ)**

## 9. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ:-

2021-22ನೇ ಸಾಲಿನಲ್ಲಿ ಹಂಚಿಕೆಯಾದ ಅನುದಾನ- ಎಸ್.ಸಿ.ಎಸ್.ಪಿ-ರೂ.2124.47 ಕೋಟಿ, ಟಿ.ಎಸ್.ಪಿ- ರೂ.1009.53 ಕೋಟಿ ಒಟ್ಟು ರೂ.3134.00 ಕೋಟಿ.

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಮಾತನಾಡಿ ಸ್ವಚ್ಛ ಭಾರತ ಯೋಜನೆಯಡಿ ಪ.ಜಾತಿ/ಪ.ಪಂಗಡದವರು ರೂ.15000/- ವೆಚ್ಚದಲ್ಲಿ ವೈಯಕ್ತಿಕ ಶೌಚಾಲಯ ನಿರ್ಮಿಸಲು ಕಷ್ಟವಾಗುತ್ತಿದೆ.ಆದ್ದರಿಂದ, ಸಹಾಯಧನದ ಮೊತ್ತವನ್ನು ಹೆಚ್ಚಿಸುವಂತೆ ಕೋರಿದರು.ಈ ಬಗ್ಗೆ ಚರ್ಚಿಸಿ ಸಹಾಯಧನದ ಮಿತಿಯನ್ನು ರೂ.20000/- ಕ್ಕೆ ಹೆಚ್ಚಿಸಲು ಮಾನ್ಯ ಮುಖ್ಯಮಂತ್ರಿಗಳು ಅನುಮೋದನೆ ನೀಡಿದರು.

ಎಂ.ನರೇಗಾ ಯೋಜನೆಯಲ್ಲಿ ಪ.ಜಾತಿ/ಪ.ಪಂಗಡದವರಿಗೆ ಕನಿಷ್ಟ 100 ದಿನಗಳ ಬದಲು 150 ದಿನಗಳಿಗೆ ಕೆಲಸ ಒದಗಿಸಲು ಪ್ರಸ್ತಾಪಿಸಲಾಯಿತು.ಈ ಬಗ್ಗೆ ಚರ್ಚಿಸಿ ಕೋವಿಡ್ ಹಿನ್ನೆಲೆಯಲ್ಲಿ ಎಲ್ಲಾ ಕೂಲಿ ಕಾರ್ಮಿಕರಿಗೆ ಅನುಕೂಲವಾಗುವಂತೆ ಕನಿಷ್ಟ 150 ದಿನಗಳ ಉದ್ಯೋಗ ಒದಗಿಸಲು ಭಾರತ ಸರ್ಕಾರಕ್ಕೆ ಮತ್ತೊಮ್ಮೆ ಪ್ರಸ್ತಾವನೆ ಸಲ್ಲಿಸಲು ಪ್ರಧಾನ ಕಾರ್ಯದರ್ಶಿ, ಆರ್.ಡಿ.ಪಿ.ಆರ್ ಇವರಿಗೆ ನಿರ್ದೇಶನ ನೀಡಲಾಯಿತು.

ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆಗೆ ಒಟ್ಟು ಅನುದಾನ ರೂ.1500.00 ಕೋಟಿಗಳಲ್ಲಿ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಅಡಿ ರೂ.1039.77ಕೋಟಿ (ರೂ.669.86+ ರೂ.369.91 ಕೋಟಿ) ಹಂಚಿಕೆ ಮಾಡಲಾಗಿದ್ದು, ಒಟ್ಟು ಅನುದಾನಕ್ಕೆ ಹೋಲಿಸಿದಾಗ 70% ಇರುತ್ತದೆ.ಇದನ್ನು ಮರು ಪರಿಶೀಲಿಸಿ ಸರಿಪಡಿಸಲು ಸಮಾಜ ಕಲ್ಯಾಣ ಇಲಾಖೆಯಿಂದ ಆರ್ಥಿಕ ಇಲಾಖೆಯನ್ನು ಕೋರಲಾಯಿತು.ಈ ಬಗ್ಗೆ ಸದ್ಯದಲ್ಲೇ ಪ್ರತ್ಯೇಕ ಸಭೆ ನಡೆಸಿ ತೀರ್ಮಾನ ಕೈಗೊಳ್ಳಲು ಆರ್ಥಿಕ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳಿಗೆ ನಿರ್ದೇಶನ ನೀಡಲಾಯಿತು.

ಪ್ರಸ್ತಾಪಿಸಿದ ಕಾರ್ಯಕ್ರಮಗಳ ಬಗ್ಗೆ ಚರ್ಚಿಸಿ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಯಿತು.

(ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ).

**(ಕ್ರಮ: ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ)**



**ಗಿರೀಶ್ ಕಿ. ಹೊಸೂರ**
**ಮುಖ್ಯಮಂತ್ರಿಯವರ ಕಾರ್ಯದರ್ಶಿ**

**10. ವಸತಿ ಇಲಾಖೆ :-**

2021-22ನೇ ಸಾಲಿನಲ್ಲಿ ಹಂಚಿಕೆಯಾದ ಅನುದಾನ- ಎಸ್.ಸಿ.ಎಸ್.ಪಿ-ರೂ.863.60 ಕೋಟಿ, ಟಿ.ಎಸ್.ಪಿ- ರೂ.141.50 ಕೋಟಿ ಒಟ್ಟು ರೂ.1005.10 ಕೋಟಿ.

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಮಾತನಾಡಿ, ನಗರ ಪ್ರದೇಶದಲ್ಲಿ ಪ.ಜಾತಿ/ಪ.ಪಂಗಡದವರ ಮನೆ ನಿರ್ಮಾಣಕ್ಕೆ ಈಗ ನೀಡಲಾಗುತ್ತಿರುವ ಸಹಾಯಧನದ ಮೊತ್ತದಲ್ಲಿ ಮನೆಗಳನ್ನು ಪೂರ್ಣಗೊಳಿಸಲು ಸಾಧ್ಯವಾಗುತ್ತಿಲ್ಲ. ಅಲ್ಲದೇ ಫಲಾನುಭವಿಗಳು ಸಾಲ ಪಡೆಯಲು ಸಹ ತೊಂದರೆ ಉಂಟಾಗಿದೆ.ಆದ್ದರಿಂದ, ಸಹಾಯಧನವನ್ನು ಹೆಚ್ಚಿಸಲು ಪ್ರಸ್ತಾಪಿಸಿದರು.

ಮಾನ್ಯ ಸದಸ್ಯರಾದ ಶ್ರೀ ಮಹೇಶ್, ಶಾಸಕರು ಕೊಳ್ಳೇಗಾಲ ಇವರು ಮಾತನಾಡಿ, ಪ.ಜಾತಿ/ಪ.ಪಂಗಡದವರಿಗೆ ಮನೆಗಳ ನಿರ್ಮಾಣಕ್ಕೆ ಹೆಚ್ಚಿನ ಅನುದಾನ ಒದಗಿಸಲು ಕೋರುತ್ತಾ ಇದರಿಂದ ಶಾಶ್ವತ ಪರಿಹಾರ ಕಲ್ಪಿಸಿದಂತಾಗುತ್ತದೆ ಎಂದು ತಿಳಿಸಿದರು.

ಮಾನ್ಯ ಸಮಾಜ ಕಲ್ಯಾಣ ಸಚಿವರು ಮತ್ತು ಮಾನ್ಯ ಉಪಮುಖ್ಯಮಂತ್ರಿಗಳು ಹಾಗೂ ಲೋಕೋಪಯೋಗಿ ಸಚಿವರು, ಕಚ್ಚಾ ಮನೆಗಳಲ್ಲಿ ಮತ್ತು ಟೆಂಟ್‌ಗಳಲ್ಲಿ ವಾಸಿಸುತ್ತಿರುವವರನ್ನು ಆದ್ಯತೆ ಮೇಲೆ ಆಯ್ಕೆ ಮಾಡಿ ವಸತಿ ಸೌಲಭ್ಯ ಒದಗಿಸಲು ಸೂಚಿಸಿದರು. ಅಲ್ಲದೇ ಡಾ॥ ಬಾಬು ಜಗಜೀವನರಾಂ ಚರ್ಮ ಕೈಗಾರಿಕೆ ಸಂಸ್ಥೆಯಿಂದ ನಿರ್ಮಿಸುವ ಮನೆಗಳಿಗೆ ರೂ. 2.50 ಲಕ್ಷ ಘಟಕ ವೆಚ್ಚವಿದ್ದು, ಫಲಾನುಭವಿಗಳು ವಸತಿ ಸೌಲಭ್ಯ ಪಡೆಯಲು ಮುಂದೆ ಬರುತ್ತಿಲ್ಲ. ಆದ್ದರಿಂದ ಘಟಕ ವೆಚ್ಚವನ್ನು ಹೆಚ್ಚಿಸುವ ಅಗತ್ಯವಿದೆ ಎಂದು ತಿಳಿಸಿದರು. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ಇವರು ಮಾತನಾಡಿ ಚರ್ಮ ಕುಶಲಕರ್ಮಿಗಳಿಗೆ ಮನೆ ಮತ್ತು ವರ್ಕ್ ಶೆಡ್‌ಗಾಗಿ ನೀಡುತ್ತಿರುವ ಘಟಕ ವೆಚ್ಚವನ್ನು ಹೆಚ್ಚಿಸುವುದು ತೀರಾ ಅಗತ್ಯವೆಂದು ತಿಳಿಸಿದರು.

ಅನುದಾನದ ಕೊರತೆಯಿದ್ದಲ್ಲಿ ಅಪೂರ್ಣಗೊಂಡಿರುವ ಮನೆಗಳನ್ನು ಆದ್ಯತೆ ಮೇಲೆ ಪೂರ್ಣಗೊಳಿಸಲು ಕ್ರಮಕೈಗೊಳ್ಳುವಂತೆ ವಸತಿ ಇಲಾಖೆ ಕಾರ್ಯದರ್ಶಿಗಳಿಗೆ ಸೂಚಿಸಲಾಯಿತು.

ಪ್ರಸ್ತಾಪಿಸಿದ ಕಾರ್ಯಕ್ರಮಗಳ ಬಗ್ಗೆ ಚರ್ಚಿಸಿ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಯಿತು.

(ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ).

**(ಕ್ರಮ: ಸರ್ಕಾರದ ಕಾರ್ಯದರ್ಶಿ, ವಸತಿ ಇಲಾಖೆ)**

**11. ನಗರಾಭಿವೃದ್ಧಿ ಇಲಾಖೆ :-**

2021-22ನೇ ಸಾಲಿನಲ್ಲಿ ಹಂಚಿಕೆಯಾದ ಅನುದಾನ- ಎಸ್.ಸಿ.ಎಸ್.ಪಿ-ರೂ.839.24 ಕೋಟಿ, ಟಿ.ಎಸ್.ಪಿ- ರೂ.315.89 ಕೋಟಿ ಒಟ್ಟು ರೂ.1155.13 ಕೋಟಿ.

ನವನಗರೋತ್ಥಾನ ಯೋಜನೆಯಡಿ ಬೆಂಗಳೂರು ನಗರದಲ್ಲಿ ವಿಶೇಷ ಮೂಲಭೂತ ಸೌಕರ್ಯಗಳಿಗಾಗಿ ಸಚಿವ ಸಂಪುಟದಿಂದ ಅನುಮೋದನೆ ಪಡೆದು ಬಂಡವಾಳ ವೆಚ್ಚದ ಲೆಕ್ಕಶೀರ್ಷಿಕೆಯಲ್ಲಿ ಹಣ ಒದಗಿಸಲಾಗುತ್ತಿದೆ. ಸದರಿ ಮೂಲಭೂತ ಸೌಕರ್ಯಗಳಿಗೆ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಲೆಕ್ಕ ಶೀರ್ಷಿಕೆ 4217-01-800-0-02 ರಡಿ ಒಟ್ಟು ರೂ.754.71 ಕೋಟಿಗಳನ್ನು ಒದಗಿಸಲಾಗಿದ್ದು, ಸದರಿ ಅನುದಾನದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಪ್ರಸ್ತಾವನೆಯಂತೆ ಕೆಲವು ಮೊತ್ತವನ್ನು ಬೇರೆ ಕಾರ್ಯಕ್ರಮಗಳಿಗೆ ನೀಡಲು ಸಾಧ್ಯವಾಗುವುದಿಲ್ಲವೆಂದು ನಗರಾಭಿವೃದ್ಧಿ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ತಿಳಿಸಿದರು.ಆರ್ಥಿಕ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳು ಸಹ ಇದೇ ಅಭಿಪ್ರಾಯ ನೀಡಿ, ಈ ಅನುದಾನವನ್ನು ಬೇರೆ ಕಾರ್ಯಕ್ರಮಗಳಿಗೆ ನೀಡಲು ಸಾಧ್ಯವಿಲ್ಲವೆಂದು ತಿಳಿಸಿದರು.

ಗಿರೀಶ್ ಆ. ಹೊಸೂರ
ಮುಖ್ಯಮಂತ್ರಿಯವರ ಕಾರ್ಯದರ್ಶಿ

ಕೊಳಚೆ ಅಭಿವೃದ್ಧಿ ಮಂಡಳ ಅಧಿಕಾರಿಗಳು ಕೊಳಚೆ ಅಭಿವೃದ್ಧಿ ಮಂಡಳಿಯಿಂದ ನಿರ್ಮಿಸಲಾಗುತ್ತಿರುವ ಮನೆಗಳ ಘಟಕ ವೆಚ್ಚ ರೂ.5.00 ಲಕ್ಷ ಇದ್ದು, ಅದರಲ್ಲಿ ಫಲಾನುಭವಿಗಳ ವಂತಿಗೆ ರೂ.1.50 ಲಕ್ಷದಲ್ಲ 50% ಅನುದಾನವನ್ನು ಸರ್ಕಾರದಿಂದ ಭರಿಸಲು ಕೋರಿರುವ ಹಿನ್ನೆಲೆಯಲ್ಲಿ ಸದರಿ ಪ್ರಸ್ತಾವನೆಯನ್ನು ಕರಡು ಕ್ರಿಯಾ ಯೋಜನೆಯಲ್ಲಿ ನೋಡಲ್ ಏಜೆನ್ಸಿಯಿಂದ ಶಿಫಾರಸ್ಸು ಮಾಡಲಾಗಿದೆ. ಆದ್ದರಿಂದ, ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿ ಬರುವ ಫಲಾನುಭವಿಗಳ ವಂತಿಗೆಯಲ್ಲಿ 50% ಅನ್ನು (ರೂ.75000/- ದಂತೆ) ಬಿ.ಬಿ.ಎಂ.ಪಿ ಯ ಸ್ವಂತ ಅನುದಾನದಲ್ಲಿ (24.10% ಮೀಸಲಾತಿ ಕಾರ್ಯಕ್ರಮದಡಿ) ನೀಡಲು ಸಮಾಜ ಕಲ್ಯಾಣ ಇಲಾಖೆಯಿಂದ ಪ್ರಸ್ತಾಪಿಸಿದರು. ಈ ಬಗ್ಗೆ ಬಿ.ಬಿ.ಎಂ.ಪಿ ಯಿಂದ ತೆಗೆದುಕೊಂಡ ಕ್ರಮದ ಬಗ್ಗೆ ಸಮಾಜ ಕಲ್ಯಾಣ ಇಲಾಖೆಗೆ ಮಾಹಿತಿ ಒದಗಿಸಲು ಸೂಚಿಸಲಾಯಿತು.

ಪ್ರಸ್ತಾಪಿಸಿದ ಇನ್ನುಳಿದ ಕಾರ್ಯಕ್ರಮಗಳ ಬಗ್ಗೆ ಚರ್ಚಿಸಿ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಯಿತು.
(ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ).

**(ಕ್ರಮ: ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ)**

## 12. ಲೋಕೋಪಯೋಗಿ ಇಲಾಖೆ :-

2021-22ನೇ ಸಾಲಿನಲ್ಲಿ ಹಂಚಿಕೆಯಾದ ಅನುದಾನ-ಎಸ್.ಸಿ.ಎಸ್.ಪಿ-ರೂ.747.05 ಕೋಟಿ, ಟಿ.ಎಸ್.ಪಿ- ರೂ.423.24 ಕೋಟಿ ಒಟ್ಟು ರೂ.1170.29 ಕೋಟಿ.

ಲೋಕೋಪಯೋಗಿ ಇಲಾಖೆ ಪ್ರಸ್ತಾಪಿಸಿರುವಂತೆ ವಿಧಾನ ಸಭಾ ಕ್ಷೇತ್ರವಾರು ಅನುದಾನ ಹಂಚಿಕೆ ಮಾಡುವುದರ ಬದಲು ಪ.ಜಾತಿ/ಪ.ಪಂಗಡದವರ ಜನಸಂಖ್ಯೆ ಆಧಾರದಲ್ಲಿ ಅನುದಾನ ಹಂಚಿಕೆ ಮಾಡಿ ಕಾಮಗಾರಿ ಅನುಷ್ಟಾನಗೊಳಿಸುವುದು ಸೂಕ್ತವೆಂದು ಆರ್ಥಿಕ ಇಲಾಖೆಯಿಂದ ಅಭಿಪ್ರಾಯ ವ್ಯಕ್ತಪಡಿಸಲಾಯಿತು.

ಮಾನ್ಯ ಶಾಸಕರುಗಳಿಂದ ಸಮಾಜ ಕಲ್ಯಾಣ ಇಲಾಖೆ ಮತ್ತು ಲೋಕೋಪಯೋಗಿ ಇಲಾಖೆಗೆ ಕಾಲೋನಿ ಅಭಿವೃದ್ಧಿ ಕಾಮಗಾರಿಗಳಿಗೆ ಅನುದಾನ ನೀಡಲು ಹೆಚ್ಚು ಒತ್ತಡವಿರುವುದಾಗಿ ಮಾನ್ಯ ಸಮಾಜ ಕಲ್ಯಾಣ ಸಚಿವರು ಪ್ರಸ್ತಾಪಿಸಿದರು. ಹಾಗೂ ಸಮಾಜ ಕಲ್ಯಾಣ ಇಲಾಖೆಯಲ್ಲಿ ಕಾಲೋನಿ ಅಭಿವೃದ್ಧಿ ಕಾರ್ಯಕ್ರಮಕ್ಕೆ ಅನುದಾನದ ಲಭ್ಯತೆ ಕಡಿಮೆ ಇರುವುದರಿಂದ ಮಾನ್ಯ ಮುಖ್ಯಮಂತ್ರಿಗಳ ಕಛೇರಿಯಿಂದ ಶೇಕಡ.20%ರಷ್ಟು, ಲೋಕೋಪಯೋಗಿ ಇಲಾಖೆಯಿಂದ ಶೇಕಡ 40%ರಷ್ಟು ಮತ್ತು ಸಮಾಜ ಕಲ್ಯಾಣ ಇಲಾಖೆಯಿಂದ ಶೇಕಡ 40%ರಷ್ಟು ಅನುದಾನವನ್ನು ಹಂಚಿಕೆ ಮಾಡಲು ಪ್ರಸ್ತಾಪಿಸಲಾಯಿತು.

ಮಾನ್ಯ ಉಪಮುಖ್ಯಮಂತ್ರಿಗಳು ಹಾಗೂ ಲೋಕೋಪಯೋಗಿ ಸಚಿವರು ಮಾತನಾಡಿ, ನೆರೆ ಹಾವಳಿಯಿಂದ ಹಾನಿಗೊಳಗಾದ ಪ.ಜಾತಿ/ಪ.ಪಂಗಡದವರ ಮನೆಗಳ ದುರಸ್ಥಿಗೆ ರೂ.100 ಕೋಟಿಗಳನ್ನು ನೀಡಲು ಲೋಕೋಪಯೋಗಿ ಇಲಾಖೆಯಿಂದ ಪ್ರಸ್ತಾಪಿಸಲಾಗಿದೆ.ಪ.ಜಾತಿ/ಪ.ಪಂಗಡದವರ ಹಿತದೃಷ್ಟಿಯಿಂದ ಈ ಪ್ರಸ್ತಾವನೆಯನ್ನು ಒಪ್ಪಬಹುದಾಗಿದೆ ಎಂದು ತಿಳಿಸಿದರು.

ಗಿರೀಶ್ ಸಿ. ಹೊಸೂರ
ಮುಖ್ಯಮಂತ್ರಿಯವರ ಕಾರ್ಯದರ್ಶಿ

ಲೋಕೋಪಯೋಗಿ ಇಲಾಖೆಗೆ 5054 ಲೆಕ್ಕ ಶೀರ್ಷಿಕೆಯಲ್ಲಿ ನೀಡಿರುವ ಅನುದಾನವನ್ನು ಬಂಡವಾಳ ಕಾರ್ಯಕ್ರಮಗಳಿಗೆ ಮಾತ್ರ ಉಪಯೋಗಿಸಬೇಕಾಗಿರುವ ಕಾರಣ ದುರಸ್ಥಿ ಕಾಮಗಾರಿಗಳಿಗೆ ಬಳಸಲು ಅವಕಾಶವಿಲ್ಲದಿರುವುದರಿಂದ ಸದರಿ ಇಲಾಖೆಯ 3054 ಲೆಕ್ಕ ಶೀರ್ಷಿಕೆಯಡಿ ಒದಗಿಸಿರುವ ರೂ.74.60 ಕೋಟಿಗಳನ್ನು ಮುಂದುವರೆದ ಕಾಮಗಾರಿಗಳಿಗೆ ಮತ್ತು ನೆರೆ ಹಾವಳಿಯಿಂದ ಹಾನಿಗೊಳಗಾದ ಪ.ಜಾತಿ/ಪ.ಪಂಗಡದವರ ಮನೆಗಳ ದುರಸ್ಥಿಗೆ ವಿನಿಯೋಗಿಸಲು ತೀರ್ಮಾನಿಸಲಾಯಿತು.

ಕಾರ್ಯಕ್ರಮಗಳ ಬಗ್ಗೆ ಚರ್ಚಿಸಿ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಯಿತು.

(ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.)

**(ಕ್ರಮ: ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ)**

**13. ಇಂಧನ ಇಲಾಖೆ :-**

2021-22ನೇ ಸಾಲಿನಲ್ಲಿ ಹಂಚಿಕೆಯಾದ ಅನುದಾನ-ಎಸ್.ಸಿ.ಎಸ್.ಪಿ-ರೂ.1634.51 ಕೋಟಿ, ಟಿ.ಎಸ್.ಪಿ- ರೂ.584.70 ಕೋಟಿ ಒಟ್ಟು ರೂ.2219.21 ಕೋಟಿ.

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಇಂಧನ ಇಲಾಖೆ ಇವರು ಮಾತನಾಡಿ, ಭಾರೀ ನೀರಾವರಿ ಮತ್ತು ಸಣ್ಣ ನೀರಾವರಿ ಇಲಾಖೆಗಳಿಂದ ಕೊರೆಯಲಾಗುತ್ತಿರುವ ಕೊಳವೆ ಬಾವಿಗಳಿಗೆ ಗಂಗಾ ಕಲ್ಯಾಣ ಯೋಜನೆಯಂತೆ ಸರಾಸರಿ ಒಂದು ಕೊಳವೆ ಬಾವಿಗೆ ರೂ.50000/-ದಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸಲು ಕರಡು ಕ್ರಿಯಾ ಯೋಜನೆಯಲ್ಲಿ ಶಿಫಾರಸ್ಸು ಮಾಡಲಾಗಿದೆ. ಆದರೆ, ಇಂಧನ ಇಲಾಖೆಗೆ ರಾಜಸ್ವ ಲೆಕ್ಕ ಶೀರ್ಷಿಕೆಯಲ್ಲಿ ಅನುದಾನ ಒದಗಿಸಿದ್ದು, ಬಂಡವಾಳ ಕಾರ್ಯಕ್ರಮಕ್ಕೆ ವೆಚ್ಚ ಭರಿಸಲು ಬರುವುದಿಲ್ಲವೆಂದು ತಿಳಿಸಿದರು.

ಗಂಗಾ ಕಲ್ಯಾಣ ಯೋಜನೆಯಲ್ಲಿ ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕ ಒದಗಿಸಲು ಫಲಾನುಭವಿಗಳಿಗೆ ರೂ.50000/- ಸಹಾಯಧನವನ್ನು ರಾಜಸ್ವ ಲೆಕ್ಕ ಶೀರ್ಷಿಕೆಯಿಂದ ನೀಡಲಾಗುತ್ತಿದ್ದು, ಇಂಧನ ಇಲಾಖೆಯ ರಾಜಸ್ವ ಲೆಕ್ಕ ಶೀರ್ಷಿಕೆಯಿಂದಲೇ ಸಹಾಯಧನ ನೀಡಬಹುದೆಂದು ಸಮಾಜ ಕಲ್ಯಾಣ ಇಲಾಖೆಯಿಂದ ತಿಳಿಸಲಾಯಿತು. ಈ ಬಗ್ಗೆ ಆರ್ಥಿಕ ಇಲಾಖೆಯಿಂದ ಸೂಕ್ತ ಕ್ರಮವಹಿಸುವಂತೆ ಸೂಚಿಸಲಾಯಿತು.

ಪ್ರಸ್ತಾಪಿಸಿದ ಕಾರ್ಯಕ್ರಮಗಳ ಬಗ್ಗೆ ಚರ್ಚಿಸಿ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಯಿತು.

(ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ).

**(ಕ್ರಮ: ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಇಂಧನ ಇಲಾಖೆ)**

**14. ಭಾರೀ ನೀರಾವರಿ ಇಲಾಖೆ :-**

2021-22ನೇ ಸಾಲಿನಲ್ಲಿ ಹಂಚಿಕೆಯಾದ ಅನುದಾನ-ಎಸ್.ಸಿ.ಎಸ್.ಪಿ-ರೂ.1017.93 ಕೋಟಿ, ಟಿ.ಎಸ್.ಪಿ- ರೂ.741.11 ಕೋಟಿ ಒಟ್ಟು ರೂ.1759.04 ಕೋಟಿ. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಮಾತಾನಾಡಿ ಭಾರಿ ನೀರಾವರಿ ಇಲಾಖೆಗೆ ಹಂಚಿಕೆ ಮಾಡಿರುವ ಅನುದಾನ ಕಡಿಮೆಯಾಗಿದ್ದು, ಈ ಮೊತ್ತವನ್ನು ಹೆಚ್ಚಿಸಲು ಕ್ರಮ ಕೈಗೊಳ್ಳುವಂತೆ ತಿಳಿಸಿದರು.



**ಗಿರೀಶ್ ಕೆ. ಹೊಸೂರ**
**ಮುಖ್ಯಮಂತ್ರಿಯವರ ಕಾರ್ಯದರ್ಶಿ**

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಭಾರೀ ನೀರಾವರಿ ಇಲಾಖೆ ಇವರು ಕೃಷ್ಣ-ಭಾಗ್ಯ ಜಲ ನಿಗಮದಡಿ ಭೂಸ್ವಾಧೀನ ವೆಚ್ಚಕ್ಕಾಗಿ ರೂ.240.00 ಕೋಟಿ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಅಡಿಯಲ್ಲಿ ಒದಗಿಸಿದ್ದು, ಸದರಿ ಅನುದಾನವನ್ನು ಭೂಸ್ವಾಧೀನ ಪ್ರಕರಣಗಳಲ್ಲಿರುವ ಎಸ್.ಸಿ/ಎಸ್.ಟಿ ರೈತರಿಗೆ ಮಾತ್ರ ಈ ಅನುದಾನವನ್ನು ಉಪಯೋಗಿಸಲಾಗುವುದೆಂದು ಪ್ರಸ್ತಾಪಿಸಿದರು. ಭೂ ಸ್ವಾಧೀನ ವೆಚ್ಚಕ್ಕೆ ಸಾಮಾನ್ಯ ಅನುದಾನವನ್ನು ಒದಗಿಸುವಂತೆ ಆರ್ಥಿಕ ಇಲಾಖೆಯನ್ನು ಸಂಪರ್ಕಿಸಲು ಮುಖ್ಯ ಕಾರ್ಯದರ್ಶಿ ತಿಳಿಸಿದರು.

ಭೂಸ್ವಾಧೀನಕ್ಕಾಗಿ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಅನುದಾನವನ್ನು ಉಪಯೋಗಿಸುವುದು ಸೂಕ್ತವಲ್ಲವೆಂದು ಎಲ್ಲಾ ಸದಸ್ಯರು ಅಭಿಪ್ರಾಯಪಟ್ಟರು. ಈ ಅನುದಾನವನ್ನು ಮತ್ತು ಬಳಕೆಯಾಗದ ಲೆಕ್ಕಶೀರ್ಷಿಕೆಯ ರೂ.190.04 ಕೋಟಿಗಳನ್ನು ಸಮಾಜ ಕಲ್ಯಾಣ ಇಲಾಖೆಯ ಕ್ರೈಸ್ ವಸತಿ ಶಾಲೆಗಳ ಕಟ್ಟಡ ನಿರ್ಮಾಣಕ್ಕೆ ನೀಡಲು ನೋಡಲ್ ಏಜೆನ್ಸಿಯಿಂದ ಪ್ರಸ್ತಾಪಿಸಲಾಯಿತು.

ಸನ್ಮಾನ್ಯ ಮುಖ್ಯಮಂತ್ರಿಗಳು ಮಾತನಾಡಿ ಪ್ರಸಕ್ತ ಸಾಲಿನಲ್ಲಿ ನೀರಾವರಿ ಕಾಮಗಾರಿಗಳಿಗೆ ಕಳೆದ ಸಾಲಿಗಿಂತ ಕಡಿಮೆ ಅನುದಾನ ಒದಗಿಸಿದ್ದು, ಹೆಚ್ಚಿನ ಅನುದಾನದ ಅಗತ್ಯವಿರುವ ಕಾರಣ ಭಾರೀ ನೀರಾವರಿ ಇಲಾಖೆಗೆ ನೀಡಿರುವ ಒಟ್ಟು ಅನುದಾನವನ್ನು ನೀರಾವರಿ ಕಾಮಗಾರಿಗಳಿಗೆ ಮಾತ್ರ ಉಪಯೋಗಿಸಲು ಸೂಚಿಸಿದರು.

ಸಾಮಾನ್ಯ ನೀರಾವರಿ ಕಾರ್ಯಕ್ರಮಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಜಮೀನಿನ ವಿಸ್ತೀರ್ಣಕ್ಕೆ ಅನುಗುಣವಾಗಿ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಅನುದಾನವನ್ನು ನೀರಾವರಿ ಕಾಮಗಾರಿಗಳಿಗೆ ಬಳಸುವಂತೆ ಕೋರಲಾಯಿತು.

ಪ್ರಸ್ತಾಪಿಸಿದ ಇನ್ನುಳಿದ ಕಾರ್ಯಕ್ರಮಗಳ ಬಗ್ಗೆ ಚರ್ಚಿಸಿ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಯಿತು.

(ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.)

**(ಕ್ರಮ: ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಭಾರೀ ನೀರಾವರಿ ಇಲಾಖೆ)**

**15. ಸಣ್ಣ ನೀರಾವರಿ ಇಲಾಖೆ :-**

2021-22ನೇ ಸಾಲಿನಲ್ಲಿ ಹಂಚಿಕೆಯಾದ ಅನುದಾನ-ಎಸ್.ಸಿ.ಎಸ್.ಪಿ-ರೂ.251.54 ಕೋಟಿ, ಟಿ.ಎಸ್.ಪಿ- ರೂ.112.36 ಕೋಟಿ ಒಟ್ಟು ರೂ.363.90 ಕೋಟಿ.

ಸಣ್ಣ ನೀರಾವರಿ ಇಲಾಖೆಯಿಂದ ಈಗಾಗಲೇ ಪ್ರಗತಿಯಲ್ಲಿರುವ ಕಾಮಗಾರಿಗಳಿಗೆ ಎಸ್.ಸಿ.ಎಸ್.ಪಿ ಅಡಿ ರೂ.471.00 ಕೋಟಿ ಟಿ.ಎಸ್.ಪಿ ಅಡಿ ರೂ.185.00 ಕೋಟಿ ಅಗತ್ಯವಿದೆ ಎಂದು ಸದರಿ ಇಲಾಖೆಯವರು ತಿಳಿಸಿದರು. ಆದ್ದರಿಂದ, ಪ್ರಸಕ್ತ ಸಾಲಿನ ಅನುದಾನವನ್ನು ಮುಂದುವರೆದ ಕಾಮಗಾರಿಗಳಿಗೆ ಉಪಯೋಗಿಸಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ಹಾಗೂ ಹೊಸ ಕಾಮಗಾರಿಗಳನ್ನು ತೆಗೆದುಕೊಳ್ಳುವುದನ್ನು ಮುಂದೂಡಲು ತೀರ್ಮಾನಿಸಲಾಯಿತು.

ಇನ್ನು ಮುಂದೆ ಅನುದಾನ ಲಭ್ಯತೆಗೆ ಒಳಪಟ್ಟು ಕಾಮಗಾರಿಗಳನ್ನು ಕೈಗೆತ್ತಿಕೊಂಡು ಕನಿಷ್ಟ ಎರಡು ವರ್ಷಗಳಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಲಾಯಿತು.

ಪ್ರಸ್ತಾಪಿಸಿದ ಕಾರ್ಯಕ್ರಮಗಳ ಬಗ್ಗೆ ಚರ್ಚಿಸಿ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಯಿತು.

(ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.)

**(ಕ್ರಮ: ಸರ್ಕಾರದ ಕಾರ್ಯದರ್ಶಿ, ಸಣ್ಣ ನೀರಾವರಿ ಇಲಾಖೆ)**



ಗಿರೀಶ್ ಹೊಸೂರ
ಮುಖ್ಯಮಂತ್ರಿಯವರ ಕಾರ್ಯದರ್ಶಿ

**16. ಯೋಜನಾ ಇಲಾಖೆ :-**

2021-22ನೇ ಸಾಲಿನಲ್ಲಿ ಹಂಚಿಕೆಯಾದ ಅನುದಾನ-ಎಸ್.ಸಿ.ಎಸ್.ಪಿ-ರೂ.494.37 ಕೋಟಿ, ಟಿ.ಎಸ್.ಪಿ- ರೂ.178.97 ಕೋಟಿ ಒಟ್ಟು ರೂ.673.34 ಕೋಟಿ.

1. ಬಳಕೆಯಾಗದ ಲೆಕ್ಕ ಶೀರ್ಷಿಕೆ ಅಡಿ ಒದಗಿಸಿರುವ ಅನುದಾನವನ್ನು ಎಸ್.ಸಿ./ಎಸ್.ಟಿ ಜನಸಂಖ್ಯೆ ಕನಿಷ್ಠ 50% ಇರುವ ಪ್ರದೇಶಗಳಲ್ಲಿ ಆರೋಗ್ಯ ಕೇಂದ್ರ, ಶಾಲೆ, ಅಂಗನವಾಡಿಗಳ ಕಟ್ಟಡಗಳಿಗೆ ಆದ್ಯತೆ ನೀಡಿ ಉಪಯೋಗಿಸಲು ಮತ್ತು ಗಡಿ ಪ್ರದೇಶಗಳಲ್ಲಿರುವ ಎಸ್.ಸಿ./ಎಸ್.ಟಿ ವಾಸಸ್ಥಳಗಳಲ್ಲಿ ಶಾಲೆ/ಅಂಗನವಾಡಿಗಳ ಉನ್ನತೀಕರಣ ಇತ್ಯಾದಿಗಳಿಗೆ ವಿನಿಯೋಗಿಸಲು ತೀರ್ಮಾನಿಸಲಾಯಿತು.
2. ಮಂಡಳಿಗಳಿಗೆ ಒದಗಿಸಿದ ಅನುದಾನ ಮತ್ತು ಶಾಸಕರ ಕ್ಷೇತ್ರಾಭಿವೃದ್ಧಿ ಅನುದಾನದಲ್ಲಿ ಆದ್ಯತೆ ಮೇಲೆ ಶಾಲೆ/ಅಂಗನವಾಡಿಗಳ ಉನ್ನತೀಕರಣ ಇತ್ಯಾದಿಗಳಿಗೆ ವಿನಿಯೋಗಿಸುವುದು.

ಪ್ರಸ್ತಾಪಿಸಿದ ಕಾರ್ಯಕ್ರಮಗಳ ಬಗ್ಗೆ ಚರ್ಚಿಸಿ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಯಿತು.

(ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.)

**(ಕ್ರಮ: ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಯೋಜನಾ ಕಾರ್ಯಕ್ರಮಗಳ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ)**

**17. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ :-**

2021-22ನೇ ಸಾಲಿನಲ್ಲಿ ಹಂಚಿಕೆಯಾದ ಅನುದಾನ-ಎಸ್.ಸಿ.ಎಸ್.ಪಿ-ರೂ.834.44 ಕೋಟಿ, ಟಿ.ಎಸ್.ಪಿ- ರೂ.310.68 ಕೋಟಿ ಒಟ್ಟು ರೂ.1145.12 ಕೋಟಿ.

2020-21 ನೇ ಸಾಲಿನಲ್ಲಿ ಬಳಕೆಯಾಗದ ಲೆಕ್ಕ ಶೀರ್ಷಿಕೆಯಡಿ ಒದಗಿಸಿರುವ ರೂ.7.16 ಕೋಟಿ ಅನುದಾನವನ್ನು ವಿನಿಯೋಗಿಸದೇ ಇರುವ ಬಗ್ಗೆ ಗಮನಿಸಿದ್ದು, ಇನ್ನು ಮುಂದೆ ಯಾವುದೇ ಕಾರಣಕ್ಕೂ ಬಳಕೆಯಾಗದ ಲೆಕ್ಕ ಶೀರ್ಷಿಕೆಯಡಿ ಒದಗಿಸುವ ಅನುದಾನವನ್ನು ವ್ಯಪಗತ ಮಾಡದೇ ಪೂರ್ಣ ಪ್ರಮಾಣದಲ್ಲಿ ಉಪಯೋಗಿಸಿಕೊಳ್ಳಲು ಕ್ರಮವಹಿಸುವಂತೆ ಸೂಚಿಸಲಾಯಿತು.

ಪ್ರಸ್ತಾಪಿಸಿದ ಕಾರ್ಯಕ್ರಮಗಳ ಬಗ್ಗೆ ಚರ್ಚಿಸಿ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಯಿತು.

(ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.)

**(ಕ್ರಮ: ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ)**

**18. ವೈದ್ಯಕೀಯ ಶಿಕ್ಷಣ ಇಲಾಖೆ :-**

2021-22ನೇ ಸಾಲಿನಲ್ಲಿ ಹಂಚಿಕೆಯಾದ ಅನುದಾನ-ಎಸ್.ಸಿ.ಎಸ್.ಪಿ-ರೂ.101.70 ಕೋಟಿ, ಟಿ.ಎಸ್.ಪಿ- ರೂ.43.73 ಕೋಟಿ ಒಟ್ಟು ರೂ.145.43 ಕೋಟಿ.



ಗಿರೀಶ್ ಆರ್. ಹೊಸೂರ
ಮುಖ್ಯಮಂತ್ರಿಯವರ ಕಾರ್ಯದರ್ಶಿ

ವೈದ್ಯಕೀಯ ಕಾಲೇಜುಗಳಲ್ಲಿ ಲಭ್ಯವಿರುವ ಅನುದಾನವನ್ನು ವಿಳಂಬ ಮಾಡದೇ ಅನುಮೋದಿತ ಕಾರ್ಯಕ್ರಮಗಳಿಗೆ ವೆಚ್ಚ ಮಾಡಲು ಮತ್ತು ಒಂದು ವೇಳೆ ಪ್ರಸಕ್ತ ಸಾಲಿನಲ್ಲಿ ಅನುದಾನ ಉಳಿಕೆಯಾದಲ್ಲಿ, ಆ ಅನುದಾನವನ್ನು ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪ.ಜಾತಿ/ಪ.ಪಂಗಡದ ವಿದ್ಯಾರ್ಥಿಗಳಿಗೆ ಸರ್ಕಾರಿ ಕಾಲೇಜುಗಳಂತೆ ಲ್ಯಾಪ್‌ಟಾಪ್ ಮತ್ತು ಇತರೆ ಸೌಲಭ್ಯ ಒದಗಿಸಲು ಸಮಾಜ ಕಲ್ಯಾಣ ಇಲಾಖೆಯಿಂದ ಪ್ರಸ್ತಾಪಿಸಲಾಯಿತು.

ವೈದ್ಯಕೀಯ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಮಾತನಾಡಿ ಸರ್ಕಾರಿ ವೈದ್ಯಕೀಯ ಕಾಲೇಜುಗಳಿಗೆ ನೀಡಲಾಗುತ್ತಿರುವ ಅನುದಾನದಿಂದ ಉಳಿಕೆಯಾಗುವ ಅನುದಾನದ ಬಗ್ಗೆ ಪರಿಶೀಲಿಸಿ, ಖಾಸಗಿ ವೈದ್ಯಕೀಯ ಕಾಲೇಜುಗಳ ಲೆಕ್ಕ ಶೀರ್ಷಿಕೆ 2210-05-105-1-13 ಗೆ ಮರುಹಂಚಿಕೆ ಮಾಡುವ ಬಗ್ಗೆ ಸಮಾಜ ಕಲ್ಯಾಣ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗುವುದು ಎಂದು ತಿಳಿಸಿದರು.

ಪ್ರಸ್ತಾಪಿಸಿದ ಕಾರ್ಯಕ್ರಮಗಳ ಬಗ್ಗೆ ಚರ್ಚಿಸಿ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಯಿತು.

(ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.)

**(ಕ್ರಮ: ಸರ್ಕಾರದ ಪ್ರಧಾನ ಕಾರ್ಯದರ್ಶಿ, ವೈದ್ಯಕೀಯ ಶಿಕ್ಷಣ ಇಲಾಖೆ)**

**19. ಉನ್ನತ ಶಿಕ್ಷಣ ಇಲಾಖೆ :-**

2021-22ನೇ ಸಾಲಿನಲ್ಲಿ ಹಂಚಿಕೆಯಾದ ಅನುದಾನ-ಎಸ್.ಸಿ.ಎಸ್.ಪಿ-ರೂ.47.95 ಕೋಟಿ, ಟಿ.ಎಸ್.ಪಿ- ರೂ.14.76 ಕೋಟಿ ಒಟ್ಟು ರೂ.62.71 ಕೋಟಿ.

ಮಾನ್ಯ ಮುಖ್ಯಮಂತ್ರಿಗಳು ಹಾಗೂ ಲೋಕೋಪಯೋಗಿ ಸಚಿವರು ಮಾತನಾಡಿ ವಿಶ್ವವಿದ್ಯಾಲಯಗಳಲ್ಲಿ ಎಸ್.ಸಿ/ಎಸ್.ಟಿ ವಿದ್ಯಾರ್ಥಿನಿಯರಿಗೆ ವಿದ್ಯಾರ್ಥಿನಿಲಯಗಳ ಅವಶ್ಯಕತೆ ಇರುತ್ತದೆ.ಆದ್ದರಿಂದ, ವಿದ್ಯಾರ್ಥಿನಿಲಯಗಳಿಗೆ ಹೆಚ್ಚಿನ ಆದ್ಯತೆ ನೀಡುವಂತೆ ತಿಳಿಸಿದರು.

ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಅಡಿ ಕಟ್ಟಡ ನಿರ್ಮಾಣಕ್ಕೆ ನೀಡಿರುವ ಅನುದಾನ ಸಾಮಾನ್ಯ ಕಾಲೇಜುಗಳಿಗೆ ನೀಡಿರುವುದೇ ಅಥವಾ ಎಸ್.ಸಿ/ಎಸ್.ಟಿ ವಿದ್ಯಾರ್ಥಿಗಳಿಗೆ ಮಾತ್ರ ನಿರ್ಮಾಣ ಮಾಡಲಾಗುತ್ತಿದೆಯೇ ಎಂದು ಶ್ರೀ ಮಹೇಶ್, ಮಾನ್ಯ ಶಾಸಕರು, ಕೊಳ್ಳೇಗಾಲ ಇವರು ಮಾಹಿತಿ ಕೇಳಿದರು.

ಈ ಹಿಂದೆಎಸ್.ಸಿ./ಎಸ್.ಟಿ ವಿದ್ಯಾರ್ಥಿಗಳಿಗೆ 10 ಪ್ರಥಮ ದರ್ಜೆ ವಸತಿ ಸಹಿತ ಕಾಲೇಜುಗಳ ಕಟ್ಟಡ ನಿರ್ಮಾಣಕ್ಕಾಗಿ ರೂ.266.00 ಕೋಟಿಗಳಿಗೆ ಅನುಮೋದನೆ ನೀಡಿದ್ದು, ಅವುಗಳನ್ನು ಪೂರ್ಣಗೊಳಿಸಲು ಈಗಾಗಲೇ ರೂ.142.00 ಕೋಟಿಗಳನ್ನು ವೆಚ್ಚ ಮಾಡಿದ್ದು, ರೂ.124.00 ಕೋಟಿ ಅನುದಾನದ ಅಗತ್ಯವಿರುತ್ತದೆ.ಆದ್ದರಿಂದ, ಪ್ರಸಕ್ತ ಸಾಲಿನಲ್ಲಿ ರೂ.108.00 ಕೋಟಿ ಅನುದಾನವನ್ನು ಕಟ್ಟಡ ನಿರ್ಮಾಣಕ್ಕೆ ನೀಡಲಾಗಿದೆಎಂದು ಸಭೆಯ ಅವಗಾಹನೆಗೆ ತರಲಾಯಿತು.

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ ಇವರುಮಾತನಾಡಿ, ಉನ್ನತ ಶಿಕ್ಷಣ ಇಲಾಖೆಯಿಂದ 55 ಹಾಸ್ಟೆಲ್‌ಗಳ ನಿರ್ಮಾಣ ಪೂರ್ಣಗೊಂಡಿದ್ದು, ರೂ.16.00 ಕೋಟಿ ಅನುದಾನ ನಿರ್ವಹಣೆಗೆ ಅಗತ್ಯವಿರುತ್ತದೆ.ಅಲ್ಲದೇ, ವಿದ್ಯಾರ್ಥಿನಿಲಯಗಳನ್ನು ನಿರ್ವಹಿಸಲು ಸಿಬ್ಬಂದಿಗಳ ಹುದ್ದೆ ಮಂಜೂರುಮಾಡಬೇಕಾಗಿದೆ ಎಂದು ಕೋರಿದರು.ಡಾ. ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್



ಗಿರೀಶ್ ಸಿ. ಹೊಸೂರ
ಮುಖ್ಯಮಂತ್ರಿಯವರ ಕಾರ್ಯದರ್ಶಿ

ಎಕನಾಮಿಕ್ಸ್ ಸಂಸ್ಥೆಯ ಕಟ್ಟಡಗಳನ್ನು ನಿರ್ಮಿಸಲಾಗಿದ್ದು, ಇನ್ನೂ ರೂ.40.00 ಕೋಟಿ ಅನುದಾನದ ಅವಶ್ಯಕತೆಯಿದೆ ಎಂದು ಹೇಳಿದರು.

ಈ ಬಗ್ಗೆ ಚರ್ಚಿಸಿ ವಿದ್ಯಾರ್ಥಿಗಳ ನಿರ್ವಹಣೆಗೆ ರೂ.16.00 ಕೋಟಿ ಮತ್ತು ಡಾ.ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಸಂಸ್ಥೆಯ ಕಟ್ಟಡಗಳನ್ನು ಪೂರ್ಣಗೊಳಿಸಲು ರೂ.40.00 ಕೋಟಿ ಒಟ್ಟು ರೂ.56.00 ಕೋಟಿಗಳನ್ನು ಹೆಚ್ಚುವರಿಯಾಗಿ ಉನ್ನತ ಶಿಕ್ಷಣ ಇಲಾಖೆಗೆ ಬಿಡುಗಡೆ ಮಾಡಲು ಮಾನ್ಯ ಮುಖ್ಯಮಂತ್ರಿಗಳು ಆರ್ಥಿಕ ಇಲಾಖೆಗೆ ಸೂಚಿಸಿದರು.

ಪ್ರಸ್ತಾಪಿಸಿದ ಕಾರ್ಯಕ್ರಮಗಳ ಬಗ್ಗೆ ಚರ್ಚಿಸಿ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಯಿತು.

(ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.)

**(ಕ್ರಮ: ಸರ್ಕಾರದ ಪ್ರಧಾನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ)**

## 20. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ :-

2021-22ನೇ ಸಾಲಿನಲ್ಲಿ ಹಂಚಿಕೆಯಾದ ಅನುದಾನ-ಎಸ್.ಸಿ.ಎಸ್.ಪಿ-ರೂ. 822.81 ಕೋಟಿ, ಟಿ.ಎಸ್.ಪಿ- ರೂ.350.85 ಕೋಟಿ ಒಟ್ಟು ರೂ. 1173.65 ಕೋಟಿ.

ಸದರಿ ಇಲಾಖೆಯಲ್ಲಿ ಈಗಾಗಲೇ ಜಾರಿಯಲ್ಲಿರುವ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಅನುದಾನ ಬಿಡುಗಡೆ ಮಾಡಲಾಗಿದೆ. ಆದರೆ, ಕ್ಷೀರ ಭಾಗ್ಯ ಯೋಜನೆಯಡಿ ಕ್ರೈಸ್ ವಸತಿ ಶಾಲೆಗಳ ವಿದ್ಯಾರ್ಥಿಗಳಿಗೆ ಹಾಲು ಒದಗಿಸಲು ಮತ್ತು 8 ರಿಂದ 10 ನೇ ತರಗತಿಯ ಎಸ್.ಸಿ./ಎಸ್.ಟಿ ವಿದ್ಯಾರ್ಥಿಗಳಿಗೆ ನೋಟ್ ಪುಸ್ತಕಗಳನ್ನು ನೀಡಲು ಕ್ರಿಯಾ ಯೋಜನೆಯಲ್ಲಿ ಪ್ರಸ್ತಾಪಿಸಿದ್ದು, ಅದನ್ನು ನೀಡಲು ಪ್ರಾಥಮಿಕ ಶಿಕ್ಷಣ ಇಲಾಖೆಯು ಒಪ್ಪಿರುತ್ತದೆ ಎಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ ಇವರು ಸಭೆಯ ಗಮನಕ್ಕೆ ತಂದರು.

ಪ್ರಸ್ತಾಪಿಸಿದ ಕಾರ್ಯಕ್ರಮಗಳ ಬಗ್ಗೆ ಚರ್ಚಿಸಿ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಯಿತು.

(ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ).

**(ಕ್ರಮ: ಸರ್ಕಾರದ ಪ್ರಧಾನ ಕಾರ್ಯದರ್ಶಿ, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ)**

## 21. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ :-

2021-22 ನೇ ಸಾಲಿನಲ್ಲಿ ಹಂಚಿಕೆಯಾದ ಅನುದಾನ-ಎಸ್.ಸಿ.ಎಸ್.ಪಿ-ರೂ.569.74 ಕೋಟಿ, ಟಿ.ಎಸ್.ಪಿ- ರೂ.230.88 ಕೋಟಿ ಒಟ್ಟು ರೂ. 800.62 ಕೋಟಿ.

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಮಾತನಾಡಿ ಅಂಗನವಾಡಿ ಕಟ್ಟಡ ನಿರ್ಮಾಣಕ್ಕೆ ಇಲಾಖೆಯಿಂದ ನೀಡುತ್ತಿರುವ ಅನುದಾನದಲ್ಲಿ ಕಟ್ಟಡ ನಿರ್ಮಾಣ ಪೂರ್ಣಗೊಳಿಸಲು ಸಾಧ್ಯವಾಗದೇ ಇರುವ ಕಾರಣ ನರೇಗಾ ಅನುದಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಇತರೆ ಇಲಾಖೆಗಳಲ್ಲಿ ಲಭ್ಯವಿರುವ ಅನುದಾನವನ್ನು ಸೇರಿಸಿ ಅಂಗನವಾಡಿ ಕಟ್ಟಡಗಳನ್ನು ಕಾಲಮಿತಿಯೊಳಗೆ ಪೂರ್ಣಗೊಳಿಸಲು ತಿಳಿಸಿದರು. ಈ ಬಗ್ಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಸಭೆ ಕರೆದು ಕ್ರಮಕೈಗೊಳ್ಳುವಂತೆ ಸಹ ಸೂಚಿಸಿದರು.



ಗಿರೀಶ್ ಸಿ. ಹೊಸೂರ
ಮುಖ್ಯಮಂತ್ರಿಯವರ ಕಾರ್ಯದರ್ಶಿ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ಸಂಬಂಧಿಸಿದಂತೆ ವಿಕಲಚೇತನರಎನ್.ಪಿ.ಡಿ.ಆರ್.ಪಿ ಕಾರ್ಯಕ್ರಮದಡಿ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಅಡಿ ರೂ.21.53 ಕೋಟಿ ಗೌರವಧನಕ್ಕಾಗಿ ನೀಡಿದ್ದು, ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಅಡಿಯಲ್ಲಿ ಗೌರವಧನ ನೀಡಲು ಅವಕಾಶವಿಲ್ಲದ ಕಾರಣ ಸದರಿ ಅನುದಾನವನ್ನು ಆದ್ಯರ್ಪಿಸಲು ಅಥವಾ ಅದೇ ಇಲಾಖೆಯಲ್ಲಿ ಅಗತ್ಯ ಕಾರ್ಯಕ್ರಮಗಳಿಗೆ ಉಪಯೋಗಿಸಬಹುದೆಂದು ಸಭೆಯ ಗಮನಕ್ಕೆ ತರಲಾಯಿತು.

ಪ್ರಸ್ತಾಪಿಸಿದ ಕಾರ್ಯಕ್ರಮಗಳ ಬಗ್ಗೆ ಚರ್ಚಿಸಿ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಯಿತು.

(ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ).

**(ಕ್ರಮ: ಸರ್ಕಾರದ ಪ್ರಧಾನ ಕಾರ್ಯದರ್ಶಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ)**

**22. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ:-**

2021-22ನೇ ಸಾಲಿನಲ್ಲಿ ಹಂಚಿಕೆಯಾದ ಅನುದಾನ-ಎಸ್.ಸಿ.ಎಸ್.ಪಿ-ರೂ.51.88 ಕೋಟಿ, ಟಿ.ಎಸ್.ಪಿ- ರೂ.25.48 ಕೋಟಿ ಒಟ್ಟು ರೂ.77.36 ಕೋಟಿ.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಶಾಲೆ ಮತ್ತು ವಸತಿ ಶಾಲೆಗಳಲ್ಲಿರುವ 25% ಎಸ್.ಸಿ./ಎಸ್.ಟಿ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಗುತ್ತಿರುವುದರಿಂದ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಅಡಿ ಅನುದಾನ ನೀಡಲಾಗುತ್ತಿದೆ.ಕಾರಣಕಾರ್ಯಕ್ರಮಗಳ ಬಗ್ಗೆ ಚರ್ಚಿಸಿ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಯಿತು.

(ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ).

**(ಕ್ರಮ: ಸರ್ಕಾರದ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ)**

**23. ಕೌಶಲ್ಯಾಭಿವೃದ್ಧಿ ಹಾಗೂ ಉದ್ಯೋಗ ಮತ್ತು ತರಬೇತಿ ಇಲಾಖೆ :-**

2021-22ನೇ ಸಾಲಿನಲ್ಲಿ ಹಂಚಿಕೆಯಾದ ಅನುದಾನ-ಎಸ್.ಸಿ.ಎಸ್.ಪಿ-ರೂ.75.51 ಕೋಟಿ, ಟಿ.ಎಸ್.ಪಿ- ರೂ.43.47 ಕೋಟಿ ಒಟ್ಟು ರೂ.118.87 ಕೋಟಿ.

ಪ್ರಸಕ್ತ ಸಾಲಿನಲ್ಲಿ ಸದರಿ ಇಲಾಖೆಯ ಕಾರ್ಯಕ್ರಮಗಳೊಂದಿಗೆ ಆದ್ಯತೆ ಮೇರೆಗೆ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ನಿರುದ್ಯೋಗಿಗಳಿಗೆ ಆರೋಗ್ಯ ಕ್ಷೇತ್ರದಲ್ಲಿ (Health sector) ಕೌಶಲ್ಯಾಭಿವೃದ್ಧಿ ತರಬೇತಿಯನ್ನು ಎಲ್ಲಾ ಜಿಲ್ಲೆಗಳಲ್ಲಿ ನೀಡಲು ಮತ್ತು ಅಲೆಮಾರಿ/ಅರೆ ಅಲೆಮಾರಿ ಕುಶಲಕರ್ಮಿಗಳಿಗೆ ವೃತ್ತಿ ಆಧಾರಿತ ತರಬೇತಿ ನೀಡಲು ಪ್ರಸ್ತಾಪಿಸಲಾಗಿದೆ.

ಪ್ರಸ್ತಾಪಿಸಿದ ಕಾರ್ಯಕ್ರಮಗಳ ಬಗ್ಗೆ ಚರ್ಚಿಸಿ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಯಿತು.

(ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ).

**(ಕ್ರಮ: ಸರ್ಕಾರದ ಕಾರ್ಯದರ್ಶಿ, ಕೌಶಲ್ಯಾಭಿವೃದ್ಧಿ ಇಲಾಖೆ)**



ಗಿರೀಶ್ ಬಿ. ಹೊಸೂರ
ಮುಖ್ಯಮಂತ್ರಿಯವರ ಕಾರ್ಯದರ್ಶಿ

**24. ಕೈಮಗ್ಗ ಮತ್ತು ಜವಳ ಇಲಾಖೆ :-**

2021-22ನೇ ಸಾಲಿನಲ್ಲಿ ಹಂಚಿಕೆಯಾದ ಅನುದಾನ-ಎಸ್.ಸಿ.ಎಸ್.ಪಿ-ರೂ.114.88 ಕೋಟಿ, ಟಿ.ಎಸ್.ಪಿ- ರೂ.53.53 ಕೋಟಿ ಒಟ್ಟು ರೂ.168.41 ಕೋಟಿ.

ಜವಳ ಇಲಾಖೆಯಲ್ಲಿ ಎಸ್.ಎಂ.ಇ.ಜವಳ/ಸಿದ್ಧ ಉಡುಪು ಘಟಕಗಳಿಗೆ ಬಂಡವಾಳ ವೆಚ್ಚದಲ್ಲಿ 75% ಸಹಾಯಧನ ಮತ್ತು 15% ಬಡ್ಡಿ ಸಹಾಯಧನ ನೀಡಲಾಗುತ್ತಿದೆ. ಆದರೆ, ಕಳೆದ 3 ವರ್ಷಗಳಲ್ಲಿ ಒದಗಿಸಿದ ಅನುದಾನಕ್ಕಿಂತ ಹೆಚ್ಚಿನ ಮೊತ್ತಕ್ಕೆ ಮಂಜೂರಾತಿ ನೀಡಿದ್ದು, ಸಹಾಯಧನ ಒದಗಿಸಲು ರೂ.300.08 ಕೋಟಿ ಬಾಕಿಯಿದೆ ಎಂದು ಸದರಿ ಇಲಾಖೆಯವರು ತಿಳಿಸಿರುತ್ತಾರೆ. ಆದ್ದರಿಂದ, ಪ್ರಸಕ್ತ ಸಾಲಿನ ಅನುದಾನವನ್ನು ಅಪೂರ್ಣಗೊಂಡಿರುವ ಘಟಕಗಳಿಗೆ ಉಪಯೋಗಿಸಲು ಆರ್ಥಿಕ ಇಲಾಖೆಯಿಂದ ತಿಳಿಸಿದರು.

ಹಿಂದಿನ ವರ್ಷವೂ ಸಹ ಈ ಬಗ್ಗೆ ಚರ್ಚಿಸಲಾಗಿದ್ದು, ಲಭ್ಯವಿರುವ ಅನುದಾನಕ್ಕಿಂತ ಹೆಚ್ಚಿನ ಮೊತ್ತದಲ್ಲಿ ಘಟಕಗಳನ್ನು ಮಂಜೂರು ಮಾಡಿದ್ದರಿಂದ ಅನುದಾನ ಕೊರತೆಯ ಸಮಸ್ಯೆ ಉದ್ಭವವಾಗಿದೆ ಎಂದು ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಲೋಕೋಪಯೋಗಿ ಸಚಿವರು ತಿಳಿಸುತ್ತಾ ಅಪೂರ್ಣಗೊಂಡಿರುವ ಘಟಕಗಳಿಗೆ ಸಹಾಯಧನ ಒದಗಿಸಬೇಕಾಗಿದೆ ಮತ್ತು ಈ ರೀತಿ ಲಭ್ಯವಿರುವ ಅನುದಾನಕ್ಕಿಂತ ಹೆಚ್ಚಿನ ಮೊತ್ತಕ್ಕೆ ಮಂಜೂರಾತಿ ನೀಡಿರುವ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸುವಂತೆ ಸರ್ಕಾರದ ಕಾರ್ಯದರ್ಶಿ, ಕೈಮಗ್ಗ ಮತ್ತು ಜವಳ ಇಲಾಖೆ ಇವರಿಗೆ ಸೂಚಿಸಿದರು.

ಬಾಕಿ ಸಹಾಯಧನ ಇರುವುದನ್ನು ಗಮನಿಸಿ ಪ್ರಸಕ್ತ ಸಾಲಿನಲ್ಲಿ ಈ ಕೆಳಗಿನಂತೆ ಕ್ರಿಯಾ ಯೋಜನೆಯಲ್ಲಿ ಪ್ರಸ್ತಾಪಿಸಲಾಗಿದೆ.

1. ಅಪೂರ್ಣಗೊಂಡಿರುವ ಘಟಕಗಳಿಗೆ ಜೇಷ್ಠತೆಯ ಮೇಲೆ ಮಂಜೂರಾತಿಯಂತೆ ಸಹಾಯಧನ ನೀಡುವುದು
2. ಮಂಜೂರಾದ ಘಟಕಗಳು ಕೆ.ಎಸ್.ಎಫ್.ಸಿ ಮತ್ತು ಬ್ಯಾಂಕ್‌ಗಳಿಂದ 4% ಬಡ್ಡಿ ದರದಲ್ಲಿ ಸಾಲ ಪಡೆದಿದ್ದಲ್ಲಿ, ಕೈಮಗ್ಗ ಮತ್ತು ಜವಳ ಇಲಾಖೆಯಿಂದ ಬಡ್ಡಿ ಸಹಾಯಧನ ನೀಡುವ ಅವಶ್ಯಕತೆಯಿಲ್ಲ.
3. ಹೊಸದಾಗಿ ಮಂಜೂರು ಮಾಡುವ ಘಟಕಗಳಿಗೆ ಸಹಾಯಧನವನ್ನು 75% ಅಥವಾ ಗರಿಷ್ಟ ರೂ.2.00 ಕೋಟಿಗಳಿಗೆ ಮಿತಿಗೊಳಿಸುವುದು.
4. ಕೆ.ಎಸ್.ಎಫ್.ಸಿ ಮತ್ತು ಬ್ಯಾಂಕ್‌ಗಳಿಂದ 4% ಬಡ್ಡಿ ಸಹಾಯಧನ ಯೋಜನೆಯಡಿ ಸಾಲ ಪಡೆಯದೇ ಇರುವ ಘಟಕಗಳಿಗೆ ಮಾತ್ರ ಬಡ್ಡಿ ಸಹಾಯಧನ ನೀಡುವುದು.
5. ಸಹಾಯಧನ ನೀಡಲು ಅನುದಾನ ಕಡಿಮೆ ಇರುವುದರಿಂದ ಪ್ರಸಕ್ತ ಸಾಲಿನಲ್ಲಿ ಸೈಜಿಂಗ್ ಘಟಕಗಳ ಸಂಘಗಳಿಗೆ ಸಹಾಯಧನ ನೀಡುವುದನ್ನು ಮುಂದೂಡುವುದು.
6. ಎಸ್.ಎಂ.ಇ ಘಟಕಗಳಿಗೆ ನಿಗದಿಪಡಿಸಿದ ಅನುದಾನದಲ್ಲಿ 25% ಅನುದಾನವನ್ನು ಹೊಸ ಘಟಕಗಳಿಗೆ ಬಂದಿರುವ ಅರ್ಜಿಗಳ ಜೇಷ್ಠತೆಯ ಮೇಲೆ ಸಹಾಯಧನ ಮಂಜೂರು ಮಾಡಬಹುದು.

ಮೇಲ್ಕಂಡಂತೆ ಸದರಿ ಇಲಾಖೆಯ ಕಾರ್ಯಕ್ರಮಗಳ ಬಗ್ಗೆ ಚರ್ಚಿಸಿ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಯಿತು.

(ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ).

(ಕ್ರಮ: ಸರ್ಕಾರದ ಕಾರ್ಯದರ್ಶಿ, ಕೈಮಗ್ಗ ಮತ್ತು ಜವಳ ಇಲಾಖೆ)



ಗಿರೀಶ್ ಆ. ಹೊಸೂರ
ಮುಖ್ಯಮಂತ್ರಿಯವರ ಕಾರ್ಯದರ್ಶಿ

## ೨೫. ಸಣ್ಣ ಕೈಗಾರಿಕೆ ಇಲಾಖೆ :-

2021-22ನೇ ಸಾಲಿನಲ್ಲಿ ಹಂಚಿಕೆಯಾದ ಅನುದಾನ-ಎಸ್.ಸಿ.ಎಸ್.ಪಿ-ರೂ.97.59 ಕೋಟಿ, ಟಿ.ಎಸ್.ಪಿ- ರೂ.36.23 ಕೋಟಿ ಒಟ್ಟು ರೂ.133.82 ಕೋಟಿ.

ಕೆ.ಐ.ಎ.ಡಿ.ಬಿ ಯಿಂದ ಪ್ರಸ್ತುತ 75% ಸಹಾಯಧನ ನೀಡುವ ಯೋಜನೆಯಡಿಯಲ್ಲಿ ನಿವೇಶನಗಳನ್ನು ಎಸ್.ಸಿ./ಎಸ್.ಟಿ ಜನರಿಗೆ ನೀಡಲಾಗುತ್ತಿದೆ ಎಂದು ತಿಳಿಸುತ್ತಾ, ಹೆಚ್ಚಿನ ಅನುದಾನ ಅಗತ್ಯವಿದೆ ಎಂದು ಸಮಾಜ ಕಲ್ಯಾಣ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳು ಸಭೆಯ ಗಮನಕ್ಕೆ ತಂದರು.

ಶ್ರೀ ಮಹೇಶ್, ಮಾನ್ಯ ಶಾಸಕರು ಕೊಳ್ಳೇಗಾಲ ಇವರು ಮಾತನಾಡಿ, ನಿವೇಶನಗಳಿಗಾಗಿ ಕೆ.ಐ.ಎ.ಡಿ.ಬಿ ಗೆ ರೂ. 249.00 ಕೋಟಿ ಅನುದಾನ ನೀಡಲು ಬಾಕಿ ಇದೆ ಎಂದು ತಿಳಿಸಿದರು. 2020-21 ನೇ ಸಾಲಿನ ಮಾರ್ಚ್-2021 ರಲ್ಲಿ ಕೆ.ಐ.ಎ.ಡಿ.ಬಿ ಗೆ ರೂ.95.00 ಕೋಟಿ ಹೆಚ್ಚುವರಿಯಾಗಿ ನೀಡಲಾಗಿದ್ದು, ಇನ್ನೂ ನಿಖರವಾಗಿ ಎಷ್ಟು ಮೊತ್ತ ಬಾಕಿ ಇದೆ ಎಂಬುದರ ಬಗ್ಗೆ ಕೆ.ಐ.ಎ.ಡಿ.ಬಿ ಯಿಂದ ಮಾಹಿತಿ ಪಡೆಯಲಾಗುವುದೆಂದು ಸಭೆಯ ಗಮನಕ್ಕೆ ತರಲಾಯಿತು.

ಪ್ರಸ್ತಾಪಿಸಿದ ಕಾರ್ಯಕ್ರಮಗಳ ಬಗ್ಗೆ ಚರ್ಚಿಸಿ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಯಿತು.

(ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ).

**(ಕ್ರಮ: ಸರ್ಕಾರದ ಕಾರ್ಯದರ್ಶಿ, ಸಣ್ಣ ಕೈಗಾರಿಕೆ ಇಲಾಖೆ)**

## 26. ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ :-

2021-22ನೇ ಸಾಲಿನಲ್ಲಿ ಹಂಚಿಕೆಯಾದ ಅನುದಾನ-ಎಸ್.ಸಿ.ಎಸ್.ಪಿ-ರೂ.416.19 ಕೋಟಿ, ಟಿ.ಎಸ್.ಪಿ- ರೂ.178.00 ಕೋಟಿ ಒಟ್ಟು ರೂ. 594.20ಕೋಟಿ.

ಹಿಂದಿನ ಸಾಲಿನಲ್ಲಿ ಎಸ್.ಸಿ./ಎಸ್.ಟಿ ಪಡಿತರ ಚೀಟಿದಾರರ ಅಂಕಿ ಅಂಶಗಳನ್ನು ಸಮಾಜ ಕಲ್ಯಾಣ ಇಲಾಖೆಗೆ ಒದಗಿಸಲು ತಿಳಿಸಿದ್ದರೂ ಸಹ ಈವರೆಗೆ ಮಾಹಿತಿಯನ್ನು ನೀಡಿರುವುದಿಲ್ಲ ಎಂಬ ಅಂಶವನ್ನು ಸಭೆಯ ಗಮನಕ್ಕೆ ತರಲಾಯಿತು.

ಈ ಬಗ್ಗೆ ಅಪರ ಮುಖ್ಯ ಕಾರ್ಯದರ್ಶಿ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಇವರು, ಈ ಹಿಂದೆ ಪಡಿತರ ಚೀಟಿಗಳನ್ನು ನೀಡುವಾಗ ಎಸ್.ಸಿ/ಎಸ್.ಟಿ ಎಂದು ಪಡಿತರ ಚೀಟಿಯಲ್ಲಿ ನಮೂದಿಸದೇ ಇರುವುದರಿಂದ ಮೇಲ್ಕಂಡ ಮಾಹಿತಿಯನ್ನು ನೀಡಲು ಸಾಧ್ಯವಾಗಲಿಲ್ಲ. ಪ್ರಸ್ತುತ ಸದರಿ ಮಾಹಿತಿಯನ್ನು ಎಲ್ಲಾ ಜಿಲ್ಲೆಗಳಿಂದ ಪಡೆದು ಸಮಾಜ ಕಲ್ಯಾಣ ಇಲಾಖೆಗೆ ನೀಡಲಾಗುವುದು ಎಂದು ತಿಳಿಸಿದರು.

ಅಲೆಮಾರಿ/ಅರೆ ಅಲೆಮಾರಿ ಇತ್ಯಾದಿ ಸಮುದಾಯದ ಕೆಲವು ಕುಟುಂಬಗಳಿಗೆ ಪಡಿತರ ಚೀಟಿಗಳು ಇಲ್ಲದೇ ಇರುವುದರಿಂದ ಕೋವಿಡ್ ಸಂದರ್ಭದಲ್ಲಿ ಗರೀಬ್ ಕಲ್ಯಾಣ ಯೋಜನೆಯಡಿ ಆಹಾರ ಧಾನ್ಯಗಳು ಸಿಗುತ್ತಿಲ್ಲವೆಂದು ಈ ಸಮುದಾಯದವರು ಮನವಿ ಸಲ್ಲಿಸಿ, ಆಹಾರ ಕಿಟ್‌ಗಳನ್ನು ಸಮಾಜ ಕಲ್ಯಾಣ ಇಲಾಖೆಯಿಂದ ಒದಗಿಸಲು ಒತ್ತಾಯಿಸುತ್ತಿದ್ದಾರೆ ಎಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ ಇವರು ಸಭೆಯ ಅವಗಾಹನೆಗೆ ತಂದರು.



ಗಿರೀಶ್ ಸಿ. ಹೊಸೂರ
ಮುಖ್ಯಮಂತ್ರಿಯವರ ಕಾರ್ಯದರ್ಶಿ

ಕೆಲವರಿಗೆ ಶಾಶ್ವತ ಮನೆ ವಿಳಾಸವಿಲ್ಲದಿರುವುದರಿಂದ ಪಡಿತರ ಚೀಟಿಗಳು ಸಿಗುತ್ತಿಲ್ಲ. ಪ್ರಸ್ತುತ, One Nation One Ration ಕಾರ್ಯಕ್ರಮದಡಿ ಪಡಿತರ ಚೀಟಿ ಇಲ್ಲದೇ ಇರುವ ಅಲೆಮಾರಿ ಇತ್ಯಾದಿ ಜನರನ್ನು ಗುರುತಿಸಿ ಬಿ.ಪಿ.ಎಲ್ ಕಾರ್ಡ್‌ಗಳನ್ನು ನೀಡಲು ಕ್ರಮವಹಿಸುವಂತೆ ಸೂಚಿಸಲಾಯಿತು.

ಪ್ರಸ್ತಾಪಿಸಿದ ಕಾರ್ಯಕ್ರಮಗಳ ಬಗ್ಗೆ ಚರ್ಚಿಸಿ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಯಿತು.

(ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ).

**(ಕ್ರಮ: ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ)**

**27. ಕಂದಾಯ ಇಲಾಖೆ :-**

2021-22ನೇ ಸಾಲಿನಲ್ಲಿ ಹಂಚಿಕೆಯಾದ ಅನುದಾನ-ಎಸ್.ಸಿ.ಎಸ್.ಪಿ-ರೂ.2271.17 ಕೋಟಿ, ಟಿ.ಎಸ್.ಪಿ- ರೂ.859.66 ಕೋಟಿ ಒಟ್ಟು ರೂ.3131.03ಕೋಟಿ.

ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ ಇವರು ಇಲಾಖೆಯಿಂದ ವಿವಿಧ ಪಿಂಚಣಿ ಮತ್ತು ಆರಾಧನ ಕಾರ್ಯಕ್ರಮಗಳನ್ನು ಅನುಷ್ಟಾನಗೊಳಿಸಲಾಗುತ್ತಿದೆ.ಆದರೆ, ಆರಾಧನಾ ಕಾರ್ಯಕ್ರಮಕ್ಕೆ ಹಂಚಿಕೆ ಮಾಡಿರುವ ಅನುದಾನ ಕಡಿಮೆಯಾಗಿದ್ದು, ಎಲ್ಲಾ ವಿಧಾನ ಸಭಾ ಕ್ಷೇತ್ರಗಳಿಗೆ ಈ ಮೊತ್ತದಲ್ಲಿ ಮರುಹಂಚಿಕೆ ಮಾಡಿ ಕಾರ್ಯಕ್ರಮ ಅನುಷ್ಟಾನಗೊಳಿಸುವುದು ಕಷ್ಟವಾಗುತ್ತದೆ ಎಂದು ತಿಳಿಸಿದರು.

ಪ್ರಸಕ್ತ ಸಾಲಿನಲ್ಲಿ ಟಿ.ಎಸ್.ಪಿ ಅಡಿ ಬಳಕೆಯಾಗದ ಲೆಕ್ಕ ಶೀರ್ಷಿಕೆ ಅಡಿ ರೂ.65.00 ಕೋಟಿ ಲಭ್ಯವಿದ್ದು, ಸದರಿ ಅನುದಾನದಿಂದ ಪ.ಪಂಗಡ ಜನರು ಹೆಚ್ಚಿರುವ ಕ್ಷೇತ್ರಗಳಲ್ಲಿ ವಿದ್ಯುತ್ ಚಿತಾಗಾರಗಳನ್ನು ಪ್ರಸ್ತಾಪಿಸಲಾಗಿದೆ ಎಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಸಮಾಜ ಕಲ್ಯಾಣ ಇಲಾಖೆ ಇವರು ಸಭೆಯ ಗಮನಕ್ಕೆ ತಂದರು.

ಗ್ರಾಮೀಣ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಜನರ ಆಚರಣೆಗಳಂತೆ ಸಾಮಾನ್ಯವಾಗಿ ಹೂಳುವ (ದಫನ) ಪದ್ಧತಿ ಇರುವ ಕಾರಣ ವಿದ್ಯುತ್ ಚಿತಾಗಾರಗಳಲ್ಲಿ ಜನರು ದಹನ ಮಾಡಲು ಒಪ್ಪುವುದಿಲ್ಲ. ಆದ್ದರಿಂದ, ವಿದ್ಯುತ್ ಚಿತಾಗಾರಗಳನ್ನು ನಿರ್ಮಿಸುವ ಅವಶ್ಯಕತೆಯಿರುವುದಿಲ್ಲ. ಸದರಿ ಅನುದಾನವನ್ನು ಸ್ಮಶಾನಗಳಿಲ್ಲದೇ ಇರುವ ಕಡೆ ಸ್ಮಶಾನಗಳನ್ನು ಅಭಿವೃದ್ಧಿ ಪಡಿಸುವುದು ಅವಶ್ಯವೆಂದು ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲಾ ಸಚಿವರು ಮತ್ತು ಸದಸ್ಯರು ಅಭಿಪ್ರಾಯಿಸಿದರು.ಆದ್ದರಿಂದ, ಬಳಕೆಯಾಗದ ಲೆಕ್ಕ ಶೀರ್ಷಿಕೆ ಅಡಿ ಲಭ್ಯವಿರುವ ಅನುದಾನವನ್ನು ಆರಾಧನಾ ಮತ್ತು ಸ್ಮಶಾನ ಅಭಿವೃದ್ಧಿ ಹಾಗೂ ಇತರೆ ಕಾರ್ಯಕ್ರಮಗಳಿಗೆ ಹಂಚಿಕೆ ಮಾಡಲು ತೀರ್ಮಾನಿಸಲಾಯಿತು.

ಪ್ರಸ್ತಾಪಿಸಿದ ಕಾರ್ಯಕ್ರಮಗಳ ಬಗ್ಗೆ ಚರ್ಚಿಸಿ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಯಿತು.

(ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ).

**(ಕ್ರಮ: ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ)**

**28. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ :-**

2021-22ನೇ ಸಾಲಿನಲ್ಲಿ ಹಂಚಿಕೆಯಾದ ಅನುದಾನ-ಎಸ್.ಸಿ.ಎಸ್.ಪಿ-ರೂ.2.85 ಕೋಟಿ, ಟಿ.ಎಸ್.ಪಿ- ರೂ.0.60 ಕೋಟಿ ಒಟ್ಟು ರೂ.3.45 ಕೋಟಿ.



ಗಿರೀಶ್ ಸಿ. ಹೊಸೂರ
ಮುಖ್ಯಮಂತ್ರಿಯವರ ಕಾರ್ಯದರ್ಶಿ

ವಾರ್ತಾ ಇಲಾಖೆಯಡಿ ಜಾರಿಯಲ್ಲಿರುವ ಕಾರ್ಯಕ್ರಮಗಳೊಂದಿಗೆ, ಸೋಷಿಯಲ್ ಮೀಡಿಯಾ/ಟ್ವಿಟ್ಟರ್, ಫೇಸ್‌ಬುಕ್ ಇತ್ಯಾದಿಗಳ ಬಗ್ಗೆ ಎಸ್.ಸಿ/ಎಸ್.ಟಿ ನಿರುದ್ಯೋಗಿಗಳಿಗೆ ತರಬೇತಿ ನೀಡಲು ಪ್ರಸ್ತಾಪಿಸಲಾಗಿದೆ ಎಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ ಇವರು ಸಭೆಯ ಗಮನಕ್ಕೆ ತಂದರು.

ಪ್ರಸ್ತಾಪಿಸಿದ ಕಾರ್ಯಕ್ರಮಗಳ ಬಗ್ಗೆ ಚರ್ಚಿಸಿ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಯಿತು.

(ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ).

**(ಕ್ರಮ: ಸರ್ಕಾರದ ಪ್ರಧಾನ ಕಾರ್ಯದರ್ಶಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ)**

**29. ಪ್ರವಾಸೋದ್ಯಮ ಇಲಾಖೆ :-**

2021-22ನೇ ಸಾಲಿನಲ್ಲಿ ಹಂಚಿಕೆಯಾದ ಅನುದಾನ-ಎಸ್.ಸಿ.ಎಸ್.ಪಿ-ರೂ.2.92 ಕೋಟಿ, ಟಿ.ಎಸ್.ಪಿ- ರೂ.1.95 ಕೋಟಿ ಒಟ್ಟು ರೂ.4.87 ಕೋಟಿ.

ಹಿಂದಿನ ವರ್ಷ ಮತ್ತು ಪ್ರಸಕ್ತ ವರ್ಷ ಕೊವಿಡ್ ಹಿನ್ನೆಲೆಯಲ್ಲಿ ಕರ್ನಾಟಕ ದರ್ಶನ ಕಾರ್ಯಕ್ರಮ ಕೈಗೆತ್ತಿಕೊಳ್ಳದೇ ಇರುವುದರಿಂದ ಪ್ರವಾಸೋದ್ಯಮ ಇಲಾಖೆಗೆ ನೀಡಿದ ಅನುದಾನವನ್ನು ಪ್ರವಾಸಿ ಟ್ಯಾಕ್ಸಿಗಳಿಗೆ ರೂ.5.00 ಲಕ್ಷಗಳ ಸಹಾಯಧನ ನೀಡಲು ಉಪಯೋಗಿಸಲು ಪ್ರಸ್ತಾಪಿಸಲಾಗಿದೆ ಎಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ ಇವರು ಸಭೆಯ ಗಮನಕ್ಕೆ ತಂದರು.

ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಲೋಕೋಪಯೋಗಿ ಸಚಿವರು ಮಾತನಾಡಿ, ಸಣ್ಣ ಪ್ರವಾಸಿ ವಾಹನಗಳಿಗೆ ಬಳಕೆದಾರರಿಂದ ಹೆಚ್ಚಿನ ಬೇಡಿಕೆ ಇರುವುದಿಲ್ಲ. ಆದ ಕಾರಣ, ಪ್ರವಾಸಕ್ಕೆ ಅನುಕೂಲವಾಗುವಂತಹ ಒಳ್ಳೆಯ ವಾಹನಗಳನ್ನು ಒದಗಿಸಬೇಕೆಂದು ಸಲಹೆ ನೀಡಿದರು.

ಮಾನ್ಯ ಸಮಾಜ ಕಲ್ಯಾಣ ಸಚಿವರು ಮಾತನಾಡಿ, ಎಸ್.ಸಿ./ಎಸ್.ಟಿ ನಿರುದ್ಯೋಗಿಗಳಿಗೆ ಅನುಕೂಲವಾಗುವಂತೆ ಪ್ರವಾಸಿ ವಾಹನಗಳನ್ನು ಒದಗಿಸಲು ತಿಳಿಸಿದರು.

ಮೇಲ್ಕಂಡ ಸಲಹೆಯಂತೆ ಕ್ರಮ ಜರುಗಿಸಲು ಸರ್ಕಾರದ ಕಾರ್ಯದರ್ಶಿ, ಪ್ರವಾಸೋದ್ಯಮ ಇಲಾಖೆ ಇವರಿಗೆ ಸೂಚಿಸಲಾಯಿತು.

(ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ).

**(ಕ್ರಮ: ಸರ್ಕಾರದ ಕಾರ್ಯದರ್ಶಿ, ಪ್ರವಾಸೋದ್ಯಮ ಇಲಾಖೆ)**

**30. ಯುವ ಸಬಲೀಕರಣ ಮತ್ತು ಕ್ರೀಡಾಇಲಾಖೆ:-**

2021-22ನೇ ಸಾಲಿನಲ್ಲಿ ಹಂಚಿಕೆಯಾದ ಅನುದಾನ-ಎಸ್.ಸಿ.ಎಸ್.ಪಿ-ರೂ.8.27 ಕೋಟಿ, ಟಿ.ಎಸ್.ಪಿ- ರೂ.2.74 ಕೋಟಿ ಒಟ್ಟು ರೂ.11.02 ಕೋಟಿ.

ಪ.ಜಾತಿ/ಪಂಗಡದ ರಾಷ್ಟ್ರ ಮತ್ತು ರಾಜ್ಯ ಮಟ್ಟದ ಅಧಿಕೃತ ಕ್ರೀಡೆಗಳಲ್ಲಿ ಪದಕ ವಿಜೇತ ಕ್ರೀಡಾಪಟುಗಳು ಸ್ವಯಂ ಉದ್ಯೋಗ ಹೊಂದಲು ಜಿಮ್ ಸ್ಥಾಪನೆ, ಕ್ರೀಡಾರೋಹಣ (Climbing) ಮತ್ತು ಜಲಸಾಹಸ ಕ್ರೀಡಾ (Water sports) ಕೇಂದ್ರಗಳ ಸ್ಥಾಪನೆಗೆ ಗರಿಷ್ಟ ರೂ. 15.00 ಲಕ್ಷ ಸಹಾಯಧನ ನೀಡಲು ಕ್ರಿಯಾ ಯೋಜನೆಯಲ್ಲಿ ಪ್ರಸ್ತಾಪಿಸಲಾಗಿದೆ ಎಂದುಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ ಇವರು ಸಭೆಯ ಗಮನಕ್ಕೆ ತಂದರು.



ಗಿರೀಶ್ �. ಹೊಸೂರ
ಮುಖ್ಯಮಂತ್ರಿಯವರ ಕಾರ್ಯದರ್ಶಿ

ಶ್ರೀ ನರಸಿಂಹ ನಾಯಕ್ (ರಾಜು ಗೌಡ), ಮಾನ್ಯ ಶಾಸಕರು, ಸುರಪುರ ಇವರ ಮಾತನಾಡಿ, ಎಸ್.ಸಿ./ಎಸ್.ಟಿ ಜನರಲ್ಲಿ ಉತ್ತಮ ಕ್ರೀಡಾ ಪಟುಗಳಿದ್ದು, ಎಲ್ಲಾ ರೀತಿಯ ಪ್ರೋತ್ಸಾಹ ನೀಡಬೇಕೆಂದು ಸಲಹೆ ನೀಡಿದರು.

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರು ಮಾತನಾಡಿ ಗ್ರಾಮೀಣ ಪ್ರದೇಶದಲ್ಲಿ ಶಿಬಿರಗಳನ್ನು ನಡೆಸಿ 100 ಕ್ರೀಡಾ ಪಟುಗಳನ್ನು ಖೇಲೋ ಇಂಡಿಯಾ ಕಾರ್ಯಕ್ರಮದಡಿ ಆಯ್ಕೆ ಮಾಡಲಾಗಿದೆ.ಇವರಿಗೆ ಉತ್ತಮ ತರಬೇತಿ ನೀಡಲು ಕ್ರಮವಹಿಸಲಾಗುವುದು ಎಂದು ತಿಳಿಸಿದರು.

ಪ್ರಸ್ತಾಪಿಸಿದ ಕಾರ್ಯಕ್ರಮಗಳ ಬಗ್ಗೆ ಚರ್ಚಿಸಿ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಯಿತು. ಇತರೆ ಇಲಾಖೆಗಳಲ್ಲಿ ವೆಚ್ಚವಾಗದೆ ಉಳಿಕೆಯಾಗುವ ಅನುದಾನವನ್ನು ಯುವ ಸಬಲೀಕರಣ ಇಲಾಖೆಗೆ ಹಂಚಿಕೆ ಮಾಡಲು ತೀರ್ಮಾನಿಸಲಾಯಿತು.

(ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ).

**(ಕ್ರಮ: ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ).**

**31. ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ:-**

2021-22ನೇ ಸಾಲಿನಲ್ಲಿ ಹಂಚಿಕೆಯಾದ ಅನುದಾನ-ಎಸ್.ಸಿ.ಎಸ್.ಪಿ-ರೂ.2.00 ಕೋಟಿ, ಟಿ.ಎಸ್.ಪಿ- ರೂ.0.50 ಕೋಟಿ ಒಟ್ಟು ರೂ.2.50 ಕೋಟಿ.

ಎಸ್.ಸಿ./ಎಸ್.ಟಿ ಜನರುಸ್ಟಾರ್ಟ್ ಅಪ್ ಮತ್ತು ಇನ್ನೊವೇಟಿವ್ ಘಟಕಗಳನ್ನು ಸ್ಥಾಪಿಸಿದಲ್ಲಿ ಆ ಘಟಕಗಳ ಹೆಚ್ಚಿನ ಅಭಿವೃದ್ಧಿಗೆ ಐ.ಟಿ.&ಬಿ.ಟಿ ಇಲಾಖೆಯಿಂದ ಸಹಾಯಧನ ನೀಡಲಾಗುತ್ತಿದೆ. ಸದರಿ ಕಾರ್ಯಕ್ರಮಕ್ಕೆ ಹೆಚ್ಚಿನ ಬೇಡಿಕೆಯಿದ್ದು, ಹೆಚ್ಚುವರಿ ಅನುದಾನದ ಅಗತ್ಯವಿದೆ ಎಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ ಇವರು ಸಭೆಯ ಗಮನಕ್ಕೆ ತಂದರು.

ಪ್ರಸ್ತಾಪಿಸಿದ ಕಾರ್ಯಕ್ರಮದ ಬಗ್ಗೆ ಚರ್ಚಿಸಿ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಯಿತು.

(ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.)

**(ಕ್ರಮ: ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ)**

**32. ಕಾರ್ಮಿಕ ಇಲಾಖೆ:-**

2021-22ನೇ ಸಾಲಿನಲ್ಲಿ ಹಂಚಿಕೆಯಾದ ಅನುದಾನ-ಎಸ್.ಸಿ.ಎಸ್.ಪಿ-ರೂ.0.69 ಕೋಟಿ, ಟಿ.ಎಸ್.ಪಿ- ರೂ.0.28 ಕೋಟಿ ಒಟ್ಟು ರೂ.0.97 ಕೋಟಿ.

ಬಾಲ ಕಾರ್ಮಿಕರ ಪುನರ್ವಸತಿ ಕಾರ್ಯಕ್ರಮಕ್ಕೆ ಮಾತ್ರ ಅನುದಾನ ನೀಡಲಾಗಿದ್ದು, ಸದರಿ ಕಾರ್ಯಕ್ರಮಕ್ಕೆ ಅನುಮೋದನೆ ನೀಡಲಾಯಿತು.

(ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.)

**(ಕ್ರಮ: ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,ಕಾರ್ಮಿಕ ಇಲಾಖೆ)**



ಗಿರೀಶ್ ಆರ್. ಹೊಸೂರ
ಮುಖ್ಯಮಂತ್ರಿಯವರ ಕಾರ್ಯದರ್ಶಿ

**೩೩. ಕನ್ನಡ ಮತ್ತು ಸಂಸ್ಕೃತಿ ಇಲಾಖೆ :-**

2021-22ನೇ ಸಾಲಿನಲ್ಲಿ ಹಂಚಿಕೆಯಾದ ಅನುದಾನ-ಎಸ್.ಸಿ.ಎಸ್.ಪಿ-ರೂ.10.82 ಕೋಟಿ, ಟಿ.ಎಸ್.ಪಿ- ರೂ.3.28 ಕೋಟಿ ಒಟ್ಟು ರೂ. 14.10 ಕೋಟಿ.

ಪ.ಜಾತಿ/ಪ.ಪಂಗಡದ ಜನರಲ್ಲಿ ಹೆಚ್ಚಾಗಿ ವಿವಿಧ ರಂಗಗಳಲ್ಲಿ ಕಲಾವಿದರು ಮತ್ತು ಸಂಘಗಳದ್ದು, ಅವರೆಲ್ಲರಿಗೂ ಕಲೆ ಮತ್ತು ಸಂಸ್ಕೃತಿ ಬಗ್ಗೆ ಪ್ರೋತ್ಸಾಹ ನೀಡಲು ಹೆಚ್ಚಿನ ಅನುದಾನ ನೀಡುವುದು ಸೂಕ್ತವೆಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ ಇವರು ಸಭೆಯ ಗಮನಕ್ಕೆ ತಂದರು.

ಪ್ರಸ್ತಾಪಿಸಿದ ಕಾರ್ಯಕ್ರಮಗಳ ಬಗ್ಗೆ ಚರ್ಚಿಸಿ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಯಿತು.

(ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.)

**(ಕ್ರಮ: ಸರ್ಕಾರದಕಾರ್ಯದರ್ಶಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ)**

**೩೪. ಸಮಾಜ ಕಲ್ಯಾಣ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ:-**

2021-22ನೇ ಸಾಲಿನಲ್ಲಿ ಹಂಚಿಕೆಯಾದ ಅನುದಾನ-ಎಸ್.ಸಿ.ಎಸ್.ಪಿ-ರೂ.3710.47 ಕೋಟಿ, ಟಿ.ಎಸ್.ಪಿ- ರೂ.1395.79 ಕೋಟಿ ಒಟ್ಟು ರೂ.5106.26 ಕೋಟಿ.

ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಯ ನಿಗಮಗಳಿಗೆ ಅತ್ಯಂತ ಕಡಿಮೆ ಅನುದಾನ ಒದಗಿಸಲಾಗಿದ್ದು, ಹೆಚ್ಚಿನ ಅನುದಾನ ಒದಗಿಸುವಂತೆ ಹಾಗೂ ಪ್ರಮುಖವಾಗಿ ಸುವಂತೆ ಎಲ್ಲಾ ಸದಸ್ಯರು ಒತ್ತಾಯಿಸಿದರು.

ಸ್ವಯಂ ಉದ್ಯೋಗದಡಿ ವಾಹನಗಳಿಗೆ ಕನಿಷ್ಟ ರೂ.3.00 ಲಕ್ಷದಿಂದ ರೂ.5.00 ಲಕ್ಷದವರೆಗೆ ಸಹಾಯಧನ ನೀಡುವಂತೆ ಶ್ರೀ ನರಸಿಂಹ ನಾಯಕ್ (ರಾಜುಗೌಡ) ಇವರು ಸಲಹೆ ನೀಡಿದರು.

ಪ್ರಸ್ತಾಪಿಸಿದ ಕಾರ್ಯಕ್ರಮಗಳ ಬಗ್ಗೆ ಚರ್ಚಿಸಿ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಯಿತು.

(ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ).

**(ಕ್ರಮ: ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ)**

ಸನ್ಮಾನ್ಯ ಮುಖ್ಯಮಂತ್ರಿಗಳು ಹಾಗೂ ರಾಜ್ಯ ಪರಿಷತ್ತಿನ ಅಧ್ಯಕ್ಷರು ಮಾತನಾಡಿ ಹಿಂದಿನ ವರ್ಷದಲ್ಲಿ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಅಡಿಯಲ್ಲಿ ರೂ.24,647 ಕೋಟಿಗಳನ್ನು ವೆಚ್ಚಮಾಡಿ 95% ಪ್ರಗತಿ ಸಾಧಿಸಲಾಗಿದೆ.ಪ್ರಸಕ್ತ ಸಾಲಿನಲ್ಲಿ ರೂ.26005 ಕೋಟಿಗಳನ್ನು ಒದಗಿಸಲಾಗಿದೆ.ಸರ್ಕಾರ ಯಾವಾಗಲೂ ಪ.ಜಾತಿ/ಪ.ಪಂಗಡದವರ ಅಭಿವೃದ್ಧಿಗಾಗಿ ಶ್ರಮಿಸುತ್ತಿದ್ದು, ಈ ಬಗ್ಗೆ ಎಲ್ಲಾ ರೀತಿಯ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ.ಆದ್ದರಿಂದ, ಎಲ್ಲಾ ಅನುಷ್ಟಾನ ಅಧಿಕಾರಿಗಳು ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಅಡಿ ನೀಡಿರುವ ಅನುದಾನವನ್ನು ಯಾವುದೇ ಕಾರಣಕ್ಕೂ ವ್ಯಪಗತ ಮಾಡದೇ 100% ಸಾಧನೆಯನ್ನು ಮಾಡಲು ತುರ್ತು ಕ್ರಮ ಕೈಗೊಳ್ಳಬೇಕೆಂದು ನಿರ್ದೇಶನ ನೀಡಿದರು.



ಗಿರೀಶ್ ಸಿ. ಹೊಸೂರ
ಮುಖ್ಯಮಂತ್ರಿಯವರ ಕಾರ್ಯದರ್ಶಿ

ಯಾವುದೇ ಇಲಾಖೆಯ ಅಧಿಕಾರಿಗಳು ಅನುಷ್ಟಾನದಲ್ಲಿ ನಿರ್ಲಕ್ಷ್ಯತೆಯನ್ನು ವಹಿಸಿದಲ್ಲಿ ಕಠಿಣ ಕ್ರಮ ಕೈಗೊಳ್ಳಲಾಗುವುದೆಂದು ಎಚ್ಚರಿಕೆ ನೀಡಿದರು.

ಸರ್ಕಾರದಿಂದ ನೀಡುವ ಎಲ್ಲಾ ಸೌಲಭ್ಯಗಳನ್ನು ಕುಟುಂಬದ ಮುಖ್ಯಸ್ಥರಾದ ಮಹಿಳೆಯರ ಹೆಸರಿಗೆ ಅಥವಾ ಜಂಟಿ ಹೆಸರಿನಲ್ಲಿ (ದಂಪತಿ) ನೀಡುವಂತೆ ಕ್ರಮವಹಿಸಲು ಸೂಚಿಸಿದರು.

**ರಾಜ್ಯ ಅಭಿವೃದ್ಧಿ ಪರಿಷತ್‌ನಿಂದ ನೀಡಿರುವ ಸಾಮಾನ್ಯ ಸೂಚನೆಗಳು**

1. ರಾಜ್ಯ ಪರಿಷತ್‌ನ ನಿರ್ಣಯಗಳಂತೆ ವಿವಿಧ ಯೋಜನೆಗಳ ಘಟಕ ವೆಚ್ಚ, ಸಹಾಯಧನದ ಮೊತ್ತ ಇತ್ಯಾದಿಗಳ ಬಗ್ಗೆ ಪರಿಷ್ಕರಿಸಬೇಕಾದಲ್ಲಿ ತಕ್ಷಣವೇ ಸರ್ಕಾರಿ ಆದೇಶಗಳನ್ನು ಸಂಬಂಧಿಸಿದ ಇಲಾಖೆಗಳು ಹೊರಡಿಸುವುದು. ಇದರಿಂದ ಅನುಷ್ಠಾನದಲ್ಲಿ ವಿಳಂಬವನ್ನು ತಡೆಗಟ್ಟಬಹುದು.
2. ಯಾವುದೇ ಇಲಾಖೆಗಳಲ್ಲಿ ಅನುದಾನ ಉಳಿಕೆಯಾದಲ್ಲಿ ಆದ್ಯರ್ಪಣೆ ಮಾಡಲು ಪ್ರಸ್ತಾವನೆಯನ್ನು ಯಾವುದೇ ವಿಳಂಬವಿಲ್ಲದೇ ಆರ್ಥಿಕ ಇಲಾಖೆಗೆ ತಕ್ಷಣ ಕಳುಹಿಸತಕ್ಕದ್ದು. ಕಲ್ಯಾಣ ಇಲಾಖೆ ಮತ್ತು ಆರ್ಥಿಕ ಇಲಾಖೆಯ ಗಮನಕ್ಕೆ ತರುವುದು.
3. ಆಯಾ ಇಲಾಖೆಯಡಿ ಒಂದು ಕಾರ್ಯಕ್ರಮದಿಂದ ಇನ್ನೊಂದು ಕಾರ್ಯಕ್ರಮಕ್ಕೆ ಅನುದಾನ ಮರುಹಂಚಿಕೆ ಮಾಡಬೇಕಾದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಮುಖಾಂತರ ಕಡತವನ್ನು ಆರ್ಥಿಕ ಇಲಾಖೆಗೆ ಸಲ್ಲಿಸುವುದು. (ಡಿಸೆಂಬರ್-2021 ರೊಳಗೆ)
4. ಎಸ್.ಸಿ.ಎಸ್.ಪಿ.ಯಿಂದ ಟಿ.ಎಸ್.ಪಿ.ಗೆ ಹಾಗೂ ಟಿ.ಎಸ್.ಪಿ. ಯಿಂದ ಎಸ್.ಸಿ.ಎಸ್.ಪಿ.ಗೆ ಅನುದಾನವನ್ನು ವರ್ಗಾಯಿಸತಕ್ಕದ್ದಲ್ಲ.
5. ಎಲ್ಲಾ ಇಲಾಖೆಗಳು ಎಸ್.ಸಿ.ಎಸ್.ಪಿ./ ಟಿ.ಎಸ್.ಪಿ. ಕಾರ್ಯಕ್ರಮಗಳನ್ನು ಸಮರ್ಪಕವಾಗಿ ಅನುಷ್ಟಾನ ಮಾಡುತ್ತಿರುವ ಬಗ್ಗೆ ಆಯಾ ಇಲಾಖೆಯ ಹಿರಿಯ ಅಧಿಕಾರಿಗಳಿಂದ ಕಡ್ಡಾಯವಾಗಿ ತಪಾಸಣೆ ನಡೆಸಿ, ಫಲಾನುಭವಿಗಳಿಗೆ ಸೌಲಭ್ಯ ದೊರೆಯುತ್ತಿರುವ ಬಗ್ಗೆ ಖಾತರಿ ಪಡಿಸಿಕೊಳ್ಳುವುದು. ಆ ಬಗ್ಗೆ ಕಾಲಕಾಲಕ್ಕೆ ವರದಿಗಳನ್ನು ಸಮಾಜ ಕಲ್ಯಾಣ ಇಲಾಖೆಗೆ ಸಲ್ಲಿಸುವುದು.
6. ಎಲ್ಲಾ ಇಲಾಖೆಗಳು ಎಸ್.ಸಿ.ಎಸ್.ಪಿ./ ಟಿ.ಎಸ್.ಪಿ. ಕಾರ್ಯಕ್ರಮಗಳ ಅನುಷ್ಟಾನದ ಪರಿಣಾಮದ ಬಗ್ಗೆ ಮೌಲ್ಯಮಾಪನ ಮಾಡಿ ವರದಿಗಳನ್ನು ಸಮಾಜ ಕಲ್ಯಾಣ ಇಲಾಖೆಗೆ ಕಳುಹಿಸುವುದು.
7. ಅಧಿನಿಯಮ, 2013 ಮತ್ತು ನಿಯಮಗಳು, 2017 ರಂತೆ ಆಯಾ ಇಲಾಖೆಗಳಲ್ಲಿ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ನೋಡಲ್ ಅಧಿಕಾರಿ ನೇಮಕ ಮತ್ತು ಉಪ ಹಂಚಿಕೆ ನೆರವು ಕೋಶಗಳನ್ನು ಸ್ಥಾಪಿಸಲು ಕ್ರಮವಹಿಸುವುದು.
8. ಎಲ್ಲಾ ಇಲಾಖೆಗಳಲ್ಲಿ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಕಾರ್ಯಕ್ರಮಗಳ ಅನುಷ್ಠಾನ ಅಧಿಕಾರಿಗಳಿಗೆ ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿ ಕಾರ್ಯಾಗಾರಗಳನ್ನು ಏರ್ಪಡಿಸಿ ಪರಿಣಿತರಿಂದ ಅರಿವು ಮೂಡಿಸುವುದು.



ಗಿರೀಶ್ ಸಿ. ಹೊಸೂರ
ಮುಖ್ಯಮಂತ್ರಿಯವರ ಕಾರ್ಯದರ್ಶಿ

9. ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಅಡಿ ಫಲಾನುಭವಿಗಳನ್ನು ಆಯ್ಕೆ ಮಾಡುವಲ್ಲಿ ಮತ್ತು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವಾಗ ತಪ್ಪದೇ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಕಾಯ್ದೆ ಮತ್ತು ನಿಯಮಗಳನ್ನು ಪಾಲಿಸಲು ಕ್ರಮವಹಿಸುವುದು.

10. ಪ.ಜಾತಿ/ಪ.ಪಂಗಡದ ಜನಸಂಖ್ಯೆಗೆ ಅನುಗುಣವಾಗಿ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಅಡಿ ಗ್ರಾಮ/ತಾಲ್ಲೂಕು/ವಿಧಾನ ಸಭಾ ಕ್ಷೇತ್ರ/ಜಿಲ್ಲೆಗಳಿಗೆ ಅನುದಾನ ಹಂಚಿಕೆ ಮಾಡುವುದು.

(ಕ್ರಮ ಎಲ್ಲಾ ಇಲಾಖೆಯ ಅನುಷ್ಠಾನ ಅಧಿಕಾರಿಗಳು)

ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಬಿ.ಎಸ್.ಯಡಿಯೂರಪ್ಪ)
ಮುಖ್ಯ ಮಂತ್ರಿಗಳು ಹಾಗೂ ಅಧ್ಯಕ್ಷರು,
ರಾಜ್ಯ ಅನುಸೂಚಿತ
ಜಾತಿಗಳು/ಅನುಸೂಚಿತ ಪಂಗಡಗಳ
ಅಭಿವೃದ್ಧಿ ಪರಿಷತ್ತು.

**ದಿನಾಂಕ: 02.07.2021 ರಂದು ನಡೆದ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ರಾಜ್ಯ ಅಭಿವೃದ್ಧಿ ಪರಿಷತ್ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳ ವಿವರ**

| ಕ್ರ ಸಂ | ಹೆಸರು | ಪದನಾಮ |
|---|---|---|
| 1. | ಶ್ರೀ ರಜನೀಶ್ ಗೋಯಲ್, ಭಾ.ಆ.ಸೇ. | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ |
| 2. | ಶ್ರೀ ಬಿ.ಹೆಚ್. ಅನಿಲ್ ಕುಮಾರ್, ಭಾ.ಆ.ಸೇ. | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ |
| 3. | ಡಾ. ಜಿ. ಕಲ್ಪನಾ, ಭಾ.ಆ.ಸೇ. | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಕಾರ್ಮಿಕ ಇಲಾಖೆ |
| 4. | ಡಾ. ರಾಜಕುಮಾರ್ ಖತ್ರಿ, ಭಾ.ಆ.ಸೇ. | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಕೃಷಿ ಇಲಾಖೆ |
| 5. | ಶ್ರೀ ರಾಕೇಶ್ ಸಿಂಗ್, ಭಾ.ಆ.ಸೇ. | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ ಮತ್ತು ಭಾರೀ ನೀರಾವರಿ ಇಲಾಖೆ |
| 6. | ಶ್ರೀ ಜಿ. ಕುಮಾರ್ ನಾಯಕ್, ಭಾ.ಆ.ಸೇ. | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಇಂಧನ ಇಲಾಖೆ ಮತ್ತು ಉನ್ನತ ಶಿಕ್ಷಣ ಇಲಾಖೆ |
| 7. | ಶ್ರೀ ತುಷಾರ್ ಗಿರಿನಾಥ್, ಭಾ.ಆ.ಸೇ. | ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಹಕಾರ ಇಲಾಖೆ |
| 8. | ಶ್ರೀ ಟಿ.ಕೆ ಅನಿಲ್ ಕುಮಾರ್, ಭಾ.ಆ.ಸೇ. | ಸರ್ಕಾರದ ಪ್ರಧಾನ ಕಾರ್ಯದರ್ಶಿ, ವೈದ್ಯಕೀಯ ಶಿಕ್ಷಣ ಇಲಾಖೆ |
| 9. | ಶ್ರೀ ಅಂಜುಂ ಪರ್ವೇಜ್, ಭಾ.ಆ.ಸೇ. | ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಾರಿಗೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು ವಾರ್ತಾ |



ಗಿರೀಶ್ ಪಿ. ಹೊಸೂರ
ಮುಖ್ಯಮಂತ್ರಿಯವರ ಕಾರ್ಯದರ್ಶಿ

| ಕ್ರ ಸಂ | ಹೆಸರು | ಪದನಾಮ |
|---|---|---|
| | | ಇಲಾಖೆ |
| 10. | ಡಾ. ಎಸ್. ಸೆಲ್ವ ಕುಮಾರ್, ಭಾ.ಆ.ಸೇ. | ಸರ್ಕಾರದ ಪ್ರಧಾನ ಕಾರ್ಯದರ್ಶಿ<br>ಕೌಶಲ್ಯಾಭಿವೃದ್ಧಿ ಇಲಾಖೆ |
| 11. | ಶ್ರೀ ಎಸ್.ಆರ್. ಉಮಾ ಶಂಕರ್ ಭಾ.ಆ.ಸೇ. | ಸರ್ಕಾರದ ಪ್ರಧಾನ ಕಾರ್ಯದರ್ಶಿ<br>ಶಿಕ್ಷಣ ಇಲಾಖೆ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ) |
| 12. | ಶ್ರೀ ಎನ್. ಮಂಜುನಾಥ ಪ್ರಸಾದ್, ಭಾ.ಆ.ಸೇ. | ಸರ್ಕಾರದ ಪ್ರಧಾನ ಕಾರ್ಯದರ್ಶಿ,<br>ಕಂದಾಯ ಇಲಾಖೆ |
| 13. | ಶ್ರೀ ಎಲ್.ಕೆ. ಅತೀಕ್, ಭಾ.ಆ.ಸೇ. | ಸರ್ಕಾರದ ಪ್ರಧಾನ ಕಾರ್ಯದರ್ಶಿ<br>ಗ್ರಾಮೀಣಾಭಿವೃದ್ಧಿ ಪಂಚಾಯತ್ ಇಲಾಖೆ |
| 14. | ಕ್ಯಾಪ್ಟನ್‌ಪಿ. ಮಣಿವಣ್ಣನ್, ಭಾ.ಆ.ಸೇ. | ಸರ್ಕಾರದ ಪ್ರಧಾನ ಕಾರ್ಯದರ್ಶಿ<br>ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ |
| 15. | ಶ್ರೀಮತಿ ವಿ.ರಶ್ಮಿ ಮಹೇಶ್, ಭಾ.ಆ.ಸೇ. | ಸರ್ಕಾರದ ಪ್ರಧಾನ ಕಾರ್ಯದರ್ಶಿ,<br>ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ |
| 16. | ಶ್ರೀ ಪಂಕಜ್ ಕುಮಾರ್ ಪಾಂಡೆ, ಭಾ.ಆ.ಸೇ. | ಸರ್ಕಾರದ ಕಾರ್ಯದರ್ಶಿ,<br>ಸಣ್ಣ ಕೈಗಾರಿಕೆ, ಕೈಮಗ್ಗ ಮತ್ತು ಜವಳಿ ಇಲಾಖೆ<br>ಹಾಗೂ ಪ್ರವಾಸೋದ್ಯಮ ಇಲಾಖೆ |
| 17. | ಶ್ರೀ ಮನೋಜ್ ಕುಮಾರ್ ಮೀನಾ,<br>ಭಾ.ಆ.ಸೇ. | ಸರ್ಕಾರದ ಕಾರ್ಯದರ್ಶಿ,<br>ವಸತಿ ಇಲಾಖೆ |
| 18. | ಡಾ. ಜೆ. ರವಿಶಂಕರ್, ಭಾ.ಆ.ಸೇ. | ಸರ್ಕಾರದ ಕಾರ್ಯದರ್ಶಿ,<br>ಕನ್ನಡ ಮತ್ತು ಸಂಸ್ಕೃತಿ ಇಲಾಖೆ |
| 19. | ಶ್ರೀ ಸಿ. ಮೃತ್ಯುಂಜಯ ಸ್ವಾಮಿ | ಸರ್ಕಾರದ ಕಾರ್ಯದರ್ಶಿ,<br>ಸಣ್ಣ ನೀರಾವರಿ ಇಲಾಖೆ |
| 20. | ಡಾ. ರವಿಕುಮಾರ್ ಸುರಪುರ, ಭಾ.ಆ.ಸೇ. | ಆಯುಕ್ತರು,<br>ಸಮಾಜ ಕಲ್ಯಾಣ ಇಲಾಖೆ ಹಾಗೂ<br>ಸಂಚಾಲಕರು, ಎಸ್.ಸಿ.ಎಸ್.ಪಿ. ನೋಡಲ್ ಏಜೆನ್ಸಿ |
| 21. | ಶ್ರೀ ಆರ್.ಕೆ ಸಿಂಗ್,<br>ಪಿ.ಸಿ.ಸಿ.ಎಫ್. (ಅಭಿವೃದ್ಧಿ) | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,<br>ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ,<br>ಇವರ ಪರವಾಗಿ |
| 22. | ಶ್ರೀಮತಿ ಬಿ. ಫೌಜಿಯಾ ತರನ್ನುಂ, ಭಾ.ಆ.ಸೇ.,<br>ನಿರ್ದೇಶಕರು, ತೋಟಗಾರಿಕೆ ಇಲಾಖೆ | ಸರ್ಕಾರದ ಪ್ರಧಾನ ಕಾರ್ಯದರ್ಶಿ<br>ತೋಟಗಾರಿಕೆ ಇಲಾಖೆ,ಇವರ ಪರವಾಗಿ |
| 23. | ಶ್ರೀ ಆರ್.ಎಸ್. ಪೆದ್ದಪ್ಪಯ್ಯ, ಭಾ.ಆ.ಸೇ.,<br>ಆಯುಕ್ತರು,ರೇಷ್ಮೆ ಇಲಾಖೆ | ಸರ್ಕಾರದ ಪ್ರಧಾನ ಕಾರ್ಯದರ್ಶಿ,<br>ರೇಷ್ಮೆ ಇಲಾಖೆ, ಇವರ ಪರವಾಗಿ |
| 24. | ಶ್ರೀಮತಿ ಪುಷ್ಪಲತಾ. ಹೆಚ್,<br>ಪ್ರಧಾನ ವ್ಯವಸ್ಥಾಪಕರು | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,<br>ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ<br>ಮತ್ತು ತಂತ್ರಜ್ಞಾನ ಇಲಾಖೆ, ಇವರ ಪರವಾಗಿ |
| 25. | ಶ್ರೀ ಪಿ.ಎಸ್. ಕಾಂತರಾಜು, ಕ.ಆ.ಸೇ | ನಿರ್ದೇಶಕರು,<br>ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಹಾಗೂ<br>ಸಂಚಾಲಕರು ಟಿ.ಎಸ್.ಪಿ. ನೋಡಲ್ ಏಜೆನ್ಸಿ |



ಗಿರೀಶ್ ಸಿ. ಹೊಸೂರ
ಮುಖ್ಯಮಂತ್ರಿಯವರ ಕಾರ್ಯದರ್ಶಿ